

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 218 Thursday 08-05-2025 E-mail : maruti.b.hosamani76@gmail.com Page: 4 Price : Rs. 1/-


# ಹಲವಾರು ಚಳುವಳಿ ಮಾಡುವ ಮೂಲಕ ಎಲ್ಲಾ ಸರ್ಕಾರಗಳಿಗೆ – ಸಮುದಾಯ ಎಚ್ಚರಿಕೆ ಕೊಟ್ಟಿದೆ



**ಸಿಹಿ ಕಹಿ ಸುದ್ದಿ,**

**ಗಜೇಂದ್ರಗಡ :** ರಾಜ್ಯ ಸರಕಾರ ಕಣ್ಣು ತೆರೆದಿದ್ದು ನಾವು ಎಚ್ಚರಿಕೆ ಯಿಂದ ನಾನು 'ಮಾದಿಗ"ಎಂದು ಹೆಸರು ನಮೂದಿಸಲು ಮಂಜುನಾಥ್ ಬುರುಡಿ ಮತ್ತು ಅವರ ತಂಡ ಅನೇಕ ಹಳ್ಳಿಗಳಿಗೆ ಭೇಟಿ ನೀಡುವುದರ ರೊಂದಿಗೆ ಕರ ಪತ್ರ ಕೊಡುವುದರ ಮೂಲಕ ಮನವಿ ಗಜೇಂದ್ರಗಡ. ಮೇ 5.6.7 ರಂದು ಜನ ಗಣತಿ ಪರಿಶಿಷ್ಟ ಜಾತಿ ರಾಜ್ಯ ಸರ್ಕಾರ ನಡೆಸುತ್ತಿದ್ದು ಆದ್ದ-ರಿಂದ ಗಜೇಂದ್ರಗಡ ತಾಲೂಕಿನ ದಲಿತ ಮುಖಂಡರಿಂದ ಗಜೇಂದ್ರಗಡ ಪಟ್ಟಣ ಸೇರಿದಂತೆ ತಾಲೂಕಿನ ಗ್ರಾಮ ಮಾಟರಂಗಿ, ಗೋಗೇರಿ, ನಾಗರಸಕೊಪ್ಪ, ಚಿಲಝೇರಿ, ಹಾಲಕೆರೆ,ಬೆಚಮಟ್ಟಿ,ರಾಂಪೂರ,ವದೇಗೋಳ,ಹಿರೆಕೊಪ್ಪ, ವೀರಾಪೂರ, ಸೂಡಿ, ದ್ಯಾಮುಣಸಿ, ಬೆನಕಟ್ಟಿ, ಪುರ್ತಗೇರಿ, ನರೇಗಲ್ಲ, ನಿಡಗುಂದಿ, ಹಿರೇಅಳಗುಂಡಿ, ಚಿಕ್ಕಾಳಗುಂಡಿ, ಶಾಂತಗೇರಿ ಇನ್ನೂ ಅನೇಕ ಹಳ್ಳಿಗಳ ಮನೆಗೆ ಭೇಟಿ ನೀಡಿ ನಮ್ಮ "ಮಾದಿಗ" ಸಮಾಜ ದವರಿಗೆ ಸುಮಾರು 101 ಜಾತಿಗಳು ಎಸ್.ಸಿ ಪಟ್ಟಿಯಲ್ಲಿ ಬರುತ್ತಾರೆ ನಾವು ಸೌಲಭ್ಯ ದಿಂದ ವಂಚಿತರಾಗಿದ್ದೇವೆ ಸುಮಾರು 30 ವರ್ಷಗಳಿಂದ ಸತತವಾಗಿ ಚಳುವಳಿ ಮಾಡುವ ಮೂಲಕ ಸರಕಾರಗಳಿಗೆ ಎಚ್ಚರಿಕೆ ಕೊಟ್ಟಿದ್ದೇವೆ ಈಗ ಎಚ್.ಎನ್ ನಾಗಮೋಹನ್ ದಾಸ್ ಅವರ ಆಯೋಗ ಪರಿಶಿಷ್ಟ ಜಾತಿ ಜನ ಗಣತಿ ನಡೆಸುತ್ತಿದ್ದು, ನಾವು ಎಚ್ಚರಿಕೆ ಯಿಂದ ಕ್ರಮ ಸಂಖ್ಯೆ 61 ರಲ್ಲಿ ಕಡ್ಡಾಯವಾಗಿ "ಮಾದಿಗ' ಎಂದು ಬರೆಸುವುದರ ಮೂಲಕ ನಮ್ಮ ಹಕ್ಕು ನಾವು ಪಡೆಯ ಬೇಕಾಗಿದೆ 2012 ರಲ್ಲಿ ಬೆಳಗಾವ್ ಸುವರ್ಣ ಸೌಧದ ಮುಂದೆ ಪೊಲೀಸರು ಲಾಠಿಗೆ ಹಲವಾರು ನಮ್ಮ ಅಣ್ಣ ತಮ್ಮಂದಿರು ಕೈ ಕಾಲುಗಳನ್ನು ಮುರಿದು ಕೊಂಡು ಇನ್ನೂ ಕೂಡ ಮನೆಯಲ್ಲಿ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. 2016 ರಲ್ಲಿ ಹುಬ್ಬಳ್ಳಿ ಸಮಾವೇಶಕ್ಕೆ ಬರುವಾಗ ಬಸವ ಕಲ್ಯಾಣದ ನಮ್ಮ ಅಣ್ಣ ತಮ್ಮಂದಿರು ಎಂಟು ಜನ ಮರಣ




ಹೊಂದಿದರು. ಸಮುದಾಯಕೋಸ್ಕರ ಅದೆಷ್ಟೋ ಹೋರಾಟಗಾರರು ತಮ್ಮ ತಮ್ಮ ತನು ಮನ ತ್ಯಾಗ ಮಾಡಿದ್ದಾರೆ. 30 ವರ್ಷಗಳ ಕಾಲ ಸರ್ಕಾರ ನಮ್ಮ ಸಮುದಾಯಕ್ಕೆ ವಂಚನೆ ಮಾಡುತ್ತಾ ಬಂದಿದ್ದೆ ಈಗಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅಂದಿನ 2016 ಹುಬ್ಬಳ್ಳಿ ಸಮಾವೇಶದಲ್ಲಿ ದುರ್ಮರಣ ಹೊಂದಿದ್ದ ಸಂದರ್ಭದಲ್ಲಿ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿದ್ದರು ಮರಣ ಹೊಂದಿದ್ದ ಕುಟುಂಬಸ್ಥರಿಗೆ ಸೌಜನ್ಯಕ್ಕಾದರೂ ಭೇಟಿ ಮಾಡದಿರುವುದು ಖಂಡನೀಯ ಇನ್ನೂ ಅರೆಬೆತ್ತಲೆ ಮೆರವಣಿಗೆ ರಸ್ತೆ ರೋಖ್ ಚಳುವಳಿ ಬೃಹತ್ ಪ್ರತಿಭಟನೆ ಡಿಸಿ ಆಫೀಸ್ ಮುತ್ತಿಗೆ ಹಲವಾರು ಚಳುವಳಿ ಮಾಡಿದೆವು ಒಳ ಮೀಸಲಾತಿ ಜಾರಿಗಾಗಿ ಬಿ.ಆರ್ ಭಾಸ್ಕರ ರವರು ಮತ್ತು ಅವರ ತಂಡ ಕ್ರಾಂತಿಕಾರಿ ಪಾದಯಾತ್ರೆ ಪ್ರೊಫೆಸರ್ ಬಿ ಕೃಷ್ಣಪ್ಪ ಸ್ಮಾರಕ ದಿಂದ ಬೆಂಗಳೂರು ಫ್ರೀಡಂ ಪಾರ್ಕ್ ನವರಿಗೆ ಪಾದಯಾತ್ರೆ ಮಾಡುವದರೊಂದಿಗೆ ಫ್ರಿಡಂ ಪಾರ್ಕನಲ್ಲಿ ದೊಡ್ಡ ಮಟ್ಟದ ಸಮಾವೇಶ ಮಾಡಿ ಪುನಃ ರಾಜ್ಯಾದ್ಯಂತ ಪ್ರತಿ ಜಿಲ್ಲೆ ಮತ್ತು ತಾಲೂಕು ಸೇರಿದಂತೆ ಹಳ್ಳಿಗಳಿಗೆ ಕ್ರಾಂತಿಕಾರಿ ರಥಯಾತ್ರೆ ಚಾಲನೆ ಇನ್ನೂ ಕೂಡ ನಿಂತಿಲ್ಲ ಈ ಮೂಲಕ ನಮ್ಮ ಎಚ್ಚರಿಕೆ ಕೊಡುತ್ತಾನೆ ಬರುತ್ತಿದ್ದೇವೆ ಆದ್ದರಿಂದ ಈಗ ಸರಕಾರ ಕಣ್ಣು ತೆರೆದಿದ್ದು ಜಾತಿ ಗಣತಿ ಮಾಡಿದ ನಂತರ ಜನ ಸಂಖ್ಯೆ ಅನುಗುಣವಾಗಿ ಒಳ ಮೀಸಲಾತಿ ಜಾರಿ ಮಾಡುವದಾಗಿ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಜಾತಿ ಗಣತಿಗೆಂದು ಅಧಿಕಾರಿಗಳು ಬಂದಾಗ ಎಚ್ಚರಿಕೆಯಿಂದ ಕಾಲಂ ನಂಬರ್ 61 ರಲ್ಲಿ "ಮಾದಿಗ" ಎಂದು ನಮೋದಿಸಿ ಎಂದು ಮುಖಂಡ ಮಂಜುನಾಥ್ ಬುರುಡಿ ಮತ್ತು ಅವರ ತಂಡ ಜಾಗೃತ ಮಾಡಿಸಿ ಕರಪತ್ರ ಹಂಚುವ ಮೂಲಕ ನಮ್ಮ ಸಮಾಜ ಇನ್ನೂ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದೇವೆ ರಾಜಕೀಯ ಸ್ಥಾನಮಾನ ದಿಂದ ವಂಚಿತರಾಗಿದ್ದೇವೆ.

ಸರಕಾರಿ ಹುದ್ದೆಯಲ್ಲಿ ಕೂಡ ಹಿಂದುಳಿದಿದ್ದೇವೆ ಎಲ್ಲಾ ಹಕ್ಕುಗಳು ಪಡೆಯ ಬೇಕಾದರೆ ಕಡ್ಡಾಯವಾಗಿ ನಿಮ್ಮ ಮನೆಗೆ ಅಧಿಕಾರಿಗಳು ಬಂದಾಗ ಕರ್ನಾಟಕ ಆದಿ ಆಂಧ್ರ ಆಗಿ ದ್ರಾವಿಡ್ ಹರಿಜನ ಎಸ್ಸಿ ಮಾತಂಗ ಎಂದು ಬರೆಸಬಾರದು ನಾನು "ಮಾದಿಗ' ಎಂದು ನಿರ್ಭಯವಾಗಿ ಬರೆಯಿಸಿ ನಮ್ಮ ನ್ಯಾಯಯುತವಾದ ಹಕ್ಕನ್ನು ಪಡೆಯೋಣ ಎಂದು ಸಮಾಜಕ್ಕೆ ಸಂದೇಶ ಕೊಟ್ಟರು

ಇದೆ ಸಂದರ್ಭದಲ್ಲಿ ಬಸವರಾಜ ಕಡಿಬಿನ, ಮಂಜುನಾಥ ಬುರಡಿ, ರವಿ ಮಾದರ, ಮಾರುತಿ ಹಾದಮನಿ, ರಮೇಶ ಕಡಿಬಿನ, ಕುಮಾರ ಸಣ್ಣಕ್ಕಿ, ಯಲ್ಲಪ್ಪ ಹಿರೇಮನಿ, ಅಯ್ಯಪ್ಪ ದಂಡಿನ, ಹನಮಂತ ಮಾದರ, ಶರಣು ದೊಡ್ಡಮನಿ, ಇನ್ನೂ ಅನೇಕರು ಉಪಸ್ಥಿತರಿದ್ದರು.

**ವರದಿ:ಅಂದಪ್ಪ ಮಾದರ**

# ಕೆರುಟಗಿ ಗ್ರಾಮದ ರೈತರಿಗೆ ಬೇಳೆ ವಿಮೆ ಜಮೆ ಆಗದ ಕಾರಣ ಗ್ರಾಮದ ರೈತರಿಂದ, ಗ್ರಾಮಸ್ಥರಿಂದ,ಉಗ್ರವಾದ ಹೋರಾಟ, ಮತ್ತು ತಹಸಿಲ್ದಾರ ಕಛೇರಿಗೆ ಮುತ್ತಿಗೆ ಹಾಕಿ – ಮನವಿ ಸಲ್ಲಿಸಲಾಯಿತು





**ಸಿಹಿ ಕಹಿ ಸುದ್ದಿ,**

**ಕೆರುಟಗಿ :** ವಿಜಯಪೂರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ, ಕೆರುಟಗಿ ಗ್ರಾಮದಲ್ಲಿನ ರೈತರುಗಳಿಗೆ ಬೇಳೆ ವಿಮೆ ತುಂಬಿದ್ದರು ಕೂಡಾ ಬೇಳೆ ವಿಮೆ ಜಮೆ ಆಗಿಲ್ಲದಂತಹ ಸಮಸ್ಯೆ ಎದುರಾಗಿ. ಬೇಳೆ ವಿಮೆ ಜಮೆ ಆಗದೆ ಇದ್ದದ್ದಕ್ಕೆ ಆಕ್ರೋಶ ಗೊಂಡ ಕೆರುಟಗಿ ಗ್ರಾಮದ ರೈತರು, ಗ್ರಾಮಸ್ಥರು, ಇವತ್ತು ಹೋರಾಟವನ್ನು ಹಮ್ಮಿಕೊಂಡು, ತಹಸಿಲ್ದಾರ ಕಛೇರಿಗೆ ಮುತ್ತಿಗೆ ಹಾಕಿ, ಗ್ರಾಮದ ರೈತರಿಗೆ ಬೇಳೆ ವಿಮೆ ಹಣವನ್ನು ಜಮೆ ಆಗದೆ ಇದ್ದದ್ದು ತಹಸಿಲ್ದಾರ್ ರಾದ ಪ್ರಕಾಶ ಸಿಂದಗಿ ಇವರಿಗೆ ಗಮನಕ್ಕೆ ತಂದು ಮನವಿಯನ್ನು ಸಲ್ಲಿಸಲಾಯಿತು.

ಇದೆ ಸಂದರ್ಭದಲ್ಲಿ ಮಾತನಾಡಿದ ಮಾಜಿ ಜಿಲ್ಲಾ ಪಂಚಾಯತ ಸದಸ್ಯರ ಪ್ರತಿ ನಿಧಿಯಾದ ಸಿದ್ದು ಬುಳ್ಳಾರವರು, ಕೇವಲ ಒಂದು ಸಾವಿರ ಹಣ ಕೋಟ್ಟಂತವರಿಗೆ ಮಾತ್ರ, ಬೇಳೆ ವಿಮೆ ಜಮೆ ಆಗಿದ್ದು, ಬೇಳೆ ವಿಮೆ ತುಂಬಿದ ರೈತರಿಗೆ, ಬೇಳೆ ವಿಮೆ ಹಣ ಜಮೆ ಆಗಿಲ್ಲ.

ಬೇರೆ ಊರಿನ ಗ್ರಾಮದ ರೈತರ ಹಣ ನಮ್ಮ ಊರಲ್ಲಿ ಜಮೆ ಆಗಿದೆ, ನಮ್ಮೂರಿನ ರೈತರಲ್ಲಿ ಬರಿ ಕೇವಲ ಹತ್ತು ಹದಿನೈದು ಜನ ರೈತರಿಗೆ ರೈತರನ್ನು ಬಿಟ್ಟರೆ ಮತ್ತೆ, ಯಾರಿಗೂ ಜಮೆ ಆಗಿಲ್ಲ. ಇದೆ ರೀತಿಯಾಗಿ ನಮ್ಮೂರಿನ ರೈತರಿಗೆ ಅನ್ಯಾಯವಾದರೆ ನಾನು ಸಹಿಸುವುದಿಲ್ಲ, ನಾವು ಸಹಿಸುವುದಿಲ್ಲ. ಮುಂದಿನ ದಿನ ಮಾನಗಳಲ್ಲಿ ರಸ್ತೆ ಬಂದ್ ಮಾಡಿ ಹೋರಾಟ ಮಾಡಲಾಗುವುದು ಮತ್ತು ಇದಕ್ಕೂ ಜಗದೆ ಬಗ್ಗದೆ ಹೋದರೆ ಆಮರಣಾಂತರ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡು ಉಗ್ರವಾದ ಹೋರಾಟ ಕೈಗೋಳ್ಳಲ್ಲಾಗುವುದು ಎಂದು ತಮ್ಮ ರೋಷಾ ಆವೇಶದ ಭಾಷಣದ ಮೂಲಕ ತಹಸಿಲ್ದಾರ್ ರವರಿಗೆ ರೈತರಿಗಾದ ಅನ್ಯಾಯವನ್ನು ತಿಳಿಸಿ ತಮ್ಮ ನೋವನ್ನು ತೋಡಿ ಕೊಂಡರು. ಈ ಹೋರಾಟದಲ್ಲಿ ಮಲಕಾಜಯ್ಯ ಮುತ್ಯಾ, ಸುಭಾಸ್ ಸಹುಕಾರ ಚಟ್ಟರಕಿ ಕುಮಾರ ಚಟ್ಟರಕಿ, ಕಲ್ಲಯ್ಯ ಮುತ್ಯಾ, ಅಜಮೀರ ಸಾಬ್ ಚೌದರಿ, ಮಲ್ಲಣ್ಣಗೌಡ ,

ಕಾಡಪ್ಪ ಗೌಡ ಬಿರಾದಾರ, ಗ್ರಾಮ ಪಂಚಾಯತ್ ಸದಸ್ಯ ಸಿದ್ರಾಮಪ್ಪ ಮಾದರ. ಏಸಣ್ಣ ಗೌಡ ಬಿರಾದಾರ, ಚಂದಪ್ಪ ಪೂಜೆರಿ ಮಕ್ತುಮ್ ಸಾಬ್ ಚೌದರಿ, ಮಲಕಪ್ಪ ನಾಯ್ಕೊಡಿ ಶಿವಪ್ಪ ಹಡೇದ, ಮಕ್ತುಮ ಸಾಬ್ ಚೌದರಿ, ಗೋಲ್ಲಾಳಪ್ಪ ಗೌಡ ಲಾಯದಗುಂದಿ, ಮೈಲಗುಲ್ಲಿ ಬುಡ್ಡೆಸಾಬ, ಬಾಗವಾನ, ಶರಣಪ್ಪ ಗುಡಿಮನಿ , ಅಂಬಾಬಾಯಿ ಜಮಾದರ ಮಡೆಮ್ಮ ಪೂಜೆರ್ತಿ ಗಂಗಾಬಾಯಿ ಜಮಾದಾರ ಬಸಪ್ಪ ಮಾದರ,ಮರಳಪ್ಪ ಬಿಳಗಿ,ನಿಂಗಪ್ಪ ಮಾದರ ಲಚ್ಚೇಮ್ಮ ಜಮಾದಾರ ಗ್ರಾಮದ ಹಿರಿಯರು, ಮುಖಂಡರು ಮಹಿಳೆಯರು, ಗ್ರಾಮಸ್ಥರು, ಬಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ**

# ಭಾರತದ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ ಬಸವಣ್ಣ–ಪ್ರಭುಶ್ರೀ



**ಚಿಮ್ಮಡ :** ಭಾರತದ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ ಬಸವಣ್ಣನವರು ಮನುಕುಲದ ಮಂದಾರವಾಗಿದ್ದಾರೆ. ವಿಶ್ವದ ವಿಚಾರ ಕ್ರಾಂತಿಯ ಇತಿಹಾಸದಲ್ಲಿ ಹನ್ನೆರಡನೇ ಶತಮಾನ ಒಂದು ಸುವರ್ಣ ಯುಗವಾಗಿದೆ. ಬಸವಣ್ಣ ಬಡವರ ನಿಧಿಯು, ವಚನ ಸಾಹಿತ್ಯದ ಸಿರಿಯಾಗಿ, ಅನುಭವ ಮಂಟಪದನಿರ್ಮಾಪಕರಾಗಿಯುಗಾವತಾರಿಯಾದ ಬಸವಣ್ಣನವರ ಜೀವನ ದಿವ್ಯದರ್ಶನವಾಗಿದೆ ಎಂದು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಚಿಮ್ಮಡ ಬಸ್ ನಿಲ್ದಾಣದ ಆವರಣದಲ್ಲಿ ಬುಧವಾರ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಅವರು ಬಸವಣ್ಣನವರ ತತ್ವಾದರ್ಶಗಳನ್ನು ಪ್ರತಿನಿತ್ಯ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ಬಸವ ನಾಡಿನಲ್ಲಿ ಜನಿಸಿದ ನಮ್ಮ ಜನ್ಮ ಸಾರ್ಥಕವಾಗುವುದು ಎಂದರು. ಸ್ಥಳಿಯ ರಘುನಾಥ ಪ್ರಿಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿದರು.

ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಮುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಣ್ಣ ಬಗನಾಳ, ಗುರಲಿಂಗಪ್ಪಾ ಪೂಜಾರಿ,

ರಾಚಯ್ಯ ಮಠಪತಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಪ್ರಭು ಪಾಲಭಾಂವಿ, ಅಶೋಕ ಧಡೂತಿ, ಪರಪ್ಪ ನೇಸೂರ, ಬಸವರಾಜ ಕುಂಚನೂರ,ಅಶೋಕ ಮೋಟಗಿ,ಪ್ರಭು ಮುಧೋಳ, ಅವ್ವಣ್ಣಪ್ಪಾ ಮುಗಳಖೋಡ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ವಿಶ್ವಗುರು ಬಸವಣ್ಣನವರ ಜಯಂತ್ಯೋತ್ಸವದ ನಿಮಿತ್ಯ ಬಸವೇಶ್ವರರ ಬೃಹತ್ ಭಾವಚಿತ್ರವನ್ನು ಟ್ರ್ಯಾಕ್ಟರಿನಲ್ಲಿಟ್ಟು ಸಕಲ ವಾದ್ಯ ವೃಂದಗಳೊಂದಿಗೆ ಮಹಿಳೆಯರು ಆರತಿ ತಟ್ಟೆಯಂದಿಗೆ ಗ್ರಾಮದ ವಿರಕ್ತಮಠದಿಂದ ಸ್ಥಳಿಯ ಬಸ್ ನಿಲ್ದಾಣದವರೆಗೆ ಬೃಹತ್ ಮೆರವಣಿಗೆ ಮಾಡಲಾಯಿತು.

# ಬಸವಶ್ರೀ ಪ್ರಶಸ್ತಿ ಪ್ರದಾನ



**ಬಾಗಲಕೋಟೆ :** ಬಸವ ಜಯಂತಿ ಅಂಗವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ ಕಸಾಪ ಭವನದಲ್ಲಿ ಬುಧವಾರ ಸಂಜೆ ಹಮ್ಮಿಕೊಂಡಿದ್ದ ಬಸವ ಜಯಂತಿ–2025 ಹಾಗೂ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೆಂಗಳೂರಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಚೆನ್ನಪ್ಪ ಕಟ್ಟಿ ಹಾಗೂ ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿಯವರು ರಬಕವಿಯ ಹಿರಿಯರು, ದಾನಿಗಳೂ ಆಗಿರುವ ಮಲ್ಲೇಶಪ್ಪ ಶಿ. ಕುಚನೂರ, ದಾಸೋಹಿಗಳಾದ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ಬಾಗಲಕೋಟೆಯ ಬಸವರಾಜ ಎಸ್. ಚಿತ್ತವಾಡಗಿ ಅವರಿಗೆ "ಬಸವಶ್ರೀ ಪ್ರಶಸ್ತಿ" ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ ಎಂ. ಎಚ್. ಗಾಣಗೇರ, ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ಹಲಕುರ್ಕಿ, ಡಾ. ವಿ. ಎಸ್. ಕಟಗಿಹಳ್ಳಿಮಠ, ಡಾ. ಪ್ರಕಾಶ ಖಾಡೆ, ಮ. ಕೃ. ಮೇಗಾಡಿ, ಡಾ. ಮೈನುದ್ದೀನ್ ರೇವಡಿಗಾರ, ಪಿ. ಎಸ್. ಆಲೂರ, ಹನಗಂಡಿ, ಹುಲಗಬಾಳಿ, ಪ್ರಿಯಾ ಕಟ್ಟಿ ಇನ್ನಿತರರು ಪಾಲ್ಗೊಂಡಿದ್ದರು.

# ಕಾರ್ಮಿಕರನ್ನು ಗೌರವದಿಂದ ಕಾಣಬೇಕು



**ರಬಕವಿ–ಬನಹಟ್ಟಿ :** ಸಮಾಜ ಮತ್ತು ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕ ವರ್ಗದ ಕೊಡುಗೆ ಅಪಾರವಾದುದು. ಆದ್ದರಿಂದ ಕಾರ್ಮಿಕರನ್ನು ಗೌರವಿಸುವುದರ ಜೊತೆಗೆ ಅವರ ಹಕ್ಕುಗಳ ರಕ್ಷಣೆಯಾಗಬೇಕೆಂದು ಹಿರಿಯ ನ್ಯಾಯವಾದಿ, ಕಾರ್ಮಿಕ ಸಂಘದ ಉಪಾಧ್ಯಕ್ಷ ಎನ್. ಎಸ್. ದೇವರವರ ತಿಳಿಸಿದರು.

ಗುರುವಾರ ಬನಹಟ್ಟಿಯ ನೇಕಾರ ಸಂಘದ ಕಾರ್ಯಾಲಯದಲ್ಲಿ ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಅವರು ಮಾತನಾಡಿದರು. ಕಾರ್ಮಿಕರು ದೇಶದ ಬೆನ್ನೆಲುಬಾಗಿದ್ದು, ಅವರು ಶ್ರಮ ಜೀವಿಗಳು.

ಅವರ ಯೋಗ ಕ್ಷೇಮದ ಕುರಿತು ಪ್ರತಿಯೊಬ್ಬರೂ ಗಮನ ನೀಡಬೇಕು.

ಕಾರ್ಮಿಕರು ತಮ್ಮ ಆರೋಗ್ಯದ ಕಡೆಗೆಗಮನನೀಡುವುದರಜೊತೆಗೆ ಉತ್ತಮವಾದ ಆರೋಗ್ಯವನ್ನು ಹೊಂದಿರಬೇಕೆಂದರು.

ಇದೇ ಸಂದರ್ಭ ಕಾರ್ಮಿಕ ಹೋರಾಟಗಾರ ದಿವಂಗತ ಎಂ. ಆಯ್. ಜುಮನಾಳರ ಸ್ಮರಣೆ ಕಾರ್ಯಕ್ರಮ ಜರುಗಿತು. ಇದಕ್ಕೂ ಪೂರ್ವದಲ್ಲಿ ನಗರಾದ್ಯಂತ ನೂರಾರುನೇಕಾರಕಾರ್ಮಿಕರಿಂದ ಮೆರವಣಿಗೆ ನಡೆಯಿತು.

ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ, ಸುರೇಶ ಕಾಡದೇವರ, ರವೀಂದ್ರ ಡಿ. ಹಳಿಂಗಳಿ, ಸಂಗಪ್ಪ ಬಿ. ಕುಂದಗೋಳ, ಬ್ರಿಜ್ಮೋಹನ ಡಾಗಾ, ಮಹಾಂತೇಶ ಬಸಪ್ಪಗೋಳ, ಸದಾ ಮುಂಡಗನೂರ, ಶಂಕರ ಕೊಣ್ಣೂರ, ನಜೀರ ಜಮಾದಾರ, ಬಸಪ್ಪ ಕೊಣ್ಣೂರ, ಸಂಗಯ್ಯ ಬಂಗಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಸರ್ಕಾರಗಳು ನಮ್ಮ ಸಮಾಜವನ್ನು ನಿಷ್ಕ್ರೀಯಗೊಳಿಸುತ್ತಿವೆ



**ರಬಕವಿ–ಬನಹಟ್ಟಿ :** ಸರ್ಕಾರಗಳು ನಮ್ಮ ಸಮಾಜವನ್ನು ನಿಷ್ಕ್ರೀಯ ಮಾಡುತ್ತಿವೆ. ನಮ್ಮನ್ನು ಯೋಚನೆ ಮಾಡದಂತೆ ಮಾಡುತ್ತಿವೆ. ಫೈಜಿ ತಂತ್ರಜ್ಞಾನ ಮತ್ತು ಐಪಿಎಲ್ ನಮ್ಮನ್ನು ನಿಷ್ಕ್ರೀಯ ಮಾಡುತ್ತಿವೆ. ಇದೊಂದು ಅಪಾಯಕಾರಿ ಬೆಳವಣಿಗೆಯಾಗಿದೆ. ಒಂದು ತಿಂಗಳುಗಳ ಕಾಲ ನಮ್ಮ ಆಲೋಚನೆಗಳನ್ನು ಸರಿಳೀಕಣಗೊಳಿಸುವುದರ ಜೊತೆಗೆ ವೈಜ್ಞಾನಿಕವಾಗಿ ಚಿಂತನೆ ಮಾಡಬೇಕು ಎಂದು ನಾಡಿನ ಹೆಸರಾಂತ ಸಾಹಿತಿ ಕುಂ. ವೀರಭದ್ರಪ್ಪ ತಿಳಿಸಿದರು.

ಅವರು ಗುರುವಾರ ಇಲ್ಲಿನ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಮತ್ತು ಬಾಗಲಕೋಟೆ ಶಾಖೆಯ ಆಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಕಾಯಕ ಯೋಗಿ ಪ್ರಶಸ್ತಿಪ್ರದಾನ,ಪುಸ್ತಕಲೋಕಾರ್ಪಣೆಮತ್ತು ತಾಲ್ಲೂಕು ಮಟ್ಟದ ಸಮಿತಿಗಳ ಪದಗ್ರಹಣ ಸಮಾರಂಭದಲ್ಲಿಪ್ರಧಾನಭಾಷಣಕಾರರಾಗಿ ಅವರು ಮಾತನಾಡಿದರು.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದಂತಹ ಕಾರ್ಯ ಜಗತ್ತಿನ ಯಾವುದೆ ಭಾಗದಲ್ಲಿ ನಡೆದಿಲ್ಲ. ಅದೊಂದು ಪವಾಡವೇ ಸರಿ. ಕರ್ನಾಟಕವನ್ನು ಬಿಹಾರ ಮತ್ತು ಉತ್ತರ ಪ್ರದೇಶವನ್ನಾಗಿ ಮಾಡದೆ ಇರುವುದಕ್ಕೆ ಹನ್ನೆರಡನೆಯ ಶತಮಾನದಲ್ಲಿ ನಡೆದಾಡಿದ ಶರಣರು ಕಾರಣರಾಗಿದ್ದಾರೆ. ಕಾಯಕ ಮತ್ತು ದಾಸೋಹ ತತ್ವಗಳು ಶ್ರೇಷ್ಠವಾಗಿವೆ. ಬಸವಣ್ಣನವರನ್ನು ನಾವೆಲ್ಲರೂ ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿ ಅಳವಡಿಸಿಕೊಳ್ಳಬೇಕು ಎಂದರು.

ಕರ್ನಾಟಕದಲ್ಲಿಯ 450 ಕ್ಕೂ ಹೆಚ್ಚು ವಿರಕ್ತ ಮಠಗಳು ಇಲ್ಲದೆ ಇರದಿದ್ದರೆ ನಾವು ಯಾರೂ ವಿದ್ಯಾವಂತರಾಗುತ್ತಿರಲಿಲ್ಲ.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಹುಲಿಕಲ್ ನಟರಾಜ ಮಾತನಾಡಿ, ಪರಿಷತ್ತು ಇವತ್ತು ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಿ ದಿನನಿತ್ಯ 15 ರಿಂದ 20 ಜನರಿಗೆ ಉಚಿತವಾಗಿ ಡಯಾಲಿಸಿಸ್ ಸೇವೆ ನೀಡುತ್ತಿದೆ. ಪರಿಷತ್ತಿನಲ್ಲಿ 42 ಸಾವಿರಕ್ಕಿಂತ ಹೆಚ್ಚು ಜನ ಇದ್ದು, ಪರಿಷತ್ತು ಮನೆ, ಮನಗಳನ್ನು ತಲುಪಿದೆ. ಪರಿಷತ್ತು ದೇವರ ವಿರೋಧಿ ಅಲ್ಲ. ನಾವು ಮೂಢ ನಂಬಿಕೆಗಳ ವಿರೋಧಿಗಳು. ಆಚರಣೆ ಇರಲಿ, ಮೂಢಾಚರಣೆ ಬೇಡ. ಮನುಷ್ಯರಿಗೆ ನೋವು ಆಗುವಂತಹ ಆಚರಣೆಗಳು ಬೇಡ. ರಾಜ್ಯದ 250 ವಿದ್ಯಾರ್ಥಿಗಳಿಂದ ಪ್ರತಿ ವಿದ್ಯಾರ್ಥಿಗೆ ರೂ. 15 ಸಾವಿರ ವೆಚ್ಚದಂತೆ ಟೆಲಿಸ್ಕೋಪ್ ಗಳನ್ನು ತಯಾರು ಮಾಡಿಸಲಾಗುತ್ತಿದೆ.


ಮುಂಬರುವ ಡಿಸೆಂಬರನಲ್ಲಿ ವಿಧಾನ ಸೌಧದ ಮುಂಭಾಗದಲ್ಲಿ ಸಂಜೆ ಆರಕ್ಕೆ ನಡೆಯುವ ಪ್ರದರ್ಶನ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟಿಸಲಿದ್ದಾರೆ. ರಾಜ್ಯದಲ್ಲಿ ಪರಿಷತ್ತು ಅನೇಕ ವೈಜ್ಞಾನಿಕ ಮತ್ತು ವೈಚಾರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜಾಗ್ರತಿಯನ್ನುಂಟು ಮಾಡುತ್ತಿದೆ ಎಂದರು.

ಚಿರಂಜೀವಿ ರೋಡಕರ್ ರಚಿಸಿದ ಕೊಡಲಿ ಕಾವು ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ರಾಜ್ಯದ 35 ಜನರಿಗೆ ಕಾಯಕ ಯೋಗಿ ಪ್ರಶಸ್ತಿಯನ್ನು ನೀಡಲಾಯಿತು.

ವಿವಿಧ ಸಮಿತಿಗಳ ಪದಗ್ರಹಣ ಸಮಾರಂಭ ನಡೆಯಿತು.

ಡಾ. ಶ್ರೀರಾಮಚಂದ್ರ, ಸುಧಾ ಹುಚ್ಚನ್ನವರ, ಡಾ. ಉಷಾದೇವಿ ಹಿರೇಮಠ, ಚಿಕ್ಕ ಹನುಮಂತಗೌಡ ದಾಕ್ಷಾಯಣಿ ಮಂಡಿ, ಡಾ. ಪ್ರಕಾಶ ಡಂಗಿ, ಸತೀಶ ಹಜಾರೆ, ಸಿದ್ದಪ್ಪ ಮೇಣಿ, ಲಿಂಗಾನಂದ ಗವಿಮಠ, ಜಿ. ಐ. ಹತ್ತಳ್ಳಿ, ಶ್ರೀಶೈಲ ಬುರ್ಲಿ, ಶೈಲಾ ಮಿರ್ಜೆ, ಬಿ. ಡಿ. ನೇಮಗೌಡ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ದೇಶದ ಆರ್ಥಿಕತೆಗೆ ಸಹಕಾರ ಕ್ಷೇತ್ರ ದೊಡ್ಡದು



**ರಬಕವಿ–ಬನಹಟ್ಟಿ:** ಜಗತ್ತಿನಲ್ಲಿ ಭಾರತ ಆರ್ಥಿಕವಾಗಿ ಐದನೇ ಸ್ಥಾನದಲ್ಲಿದೆ. ಇದರಲ್ಲಿ ಸಹಕಾರಿ ರಂಗದ ಬಹುದೊಡ್ಡ ಕೊಡುಗೆಯಿದೆ ಎಂದು ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.

ಬನಹಟ್ಟಿ ಸಿಟಿ ಸಹಕಾರಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭಗೊಂಡಿದ್ದ ಸಹಕಾರಿ ಚಳುವಳಿ ಇಂದು ಕ್ರಾಂತಿಯ ರೀತಿಯಲ್ಲಿ ಬೆಳೆದು ನಿಂತಿದೆ. ರಾಜ್ಯದಲ್ಲಿಯೇ ಅತ್ಯುತ್ತಮ ಸಹಕಾರಿ ವ್ಯವಸ್ಥೆ ಬಾಗಲಕೋಟೆ ಜಿಲ್ಲೆಯಲ್ಲಿದೆ ಎಂದರು.

ನೇಕಾರ ಪ್ರಧಾನ ಕ್ಷೇತ್ರವಾಗಿರುವ ರಬಕವಿ–ಬನಹಟ್ಟಿಯಲ್ಲಿ ಸಹಕಾರಿ ರಂಗದ ಬಹು ದೊಡ್ಡ ಕೊಡುಗೆಯಿದೆ. ಸಾಮಾನ್ಯರಿಂದ ಸಹಕಾರಿ ಸಂಸ್ಥೆಗಳು ಹುಟ್ಟಿ ಇಂದು ಪ್ರಗತಿ ಸಾಧಿಸುವ ಜತೆಗೆ ಉತ್ತಮ ವ್ಯವಹಾರ ಜ್ಞಾನವನ್ನು ಕಲಿಸಿಕೊಟ್ಟಿವೆಯೆಂದರು.

ಪ್ರೊ.ಬಿ.ಕೆ.ಕೊಣ್ಣೂರಮಾತನಾಡಿ,ಸಹಕಾರಿಕ್ಷೇತ್ರದಿಂದ ಹೊರಗುಳಿದವರನ್ನು ಜತೆಗೆ ಸೇರಿಸಿಕೊಂಡು ಈ ಕ್ಷೇತ್ರವನ್ನು ಬಲಿಷ್ಠಗೊಳಿಸಬೇಕೆಂದರು.

ಹಿರೇಮಠದ ಶರಣಬಸವ ಶಿವಾಚಾರ್ಯರು ಆಶೀರ್ವಚನ ನೀಡಿದರು. ಪ್ರಕಾಶ ದೇಸಾಯಿ, ರತ್ನಾ ಕೊಳಕಿ, ಕಮಲಾಕ್ಷಿ ತಳವಾರ, ಸುನೀಲ ದೊಡಮನಿ, ಮಧುಮತಿ ಕೊಳಕಿ, ಮಹಾದೇವಿ ಕೊಳಕಿ, ಶ್ರೀಶೈಲ ಕೊಳಕಿ,ಸುಜಾತಾ ದೊಡಮನಿ,ಚಿದಾನಂದ ಹೊರಟ್ಟಿ, ಬಸವರಾಜ ಭದ್ರನ್ನವರ, ಎಸ್. ಕೆ. ನಡುವಿನಕೇರಿ, ಬಾಳು ಗಣೇಶನವರ, ಗಂಗಪ್ಪ ಉಳ್ಳಾಗಡ್ಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಜನಗಣತಿಯೊಂದಿಗೆ ಜಾತಿಗಣತಿ ಸೇರ್ಪಡೆ. ಸಂಸದ ಕಡಾಡಿ ಅಭಿನಂದನೆ



**ಮೂಡಲಗಿ:** ಜನಗಣತಿಯೊಂದಿಗೆಜಾತಿಗಣತಿಯನ್ನು ಸೇರ್ಪಡೆಗೊಳಿಸುವ ಮೂಲಕ ಸಾಮಾಜಿಕ ನ್ಯಾಯ ವಿತರಿಸಲು ತನ್ನ ನೈಜ ಬದ್ಧತೆಯನ್ನು ತೋರಿಸಿದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದನಿರ್ಧಾರವನ್ನುಸ್ವಾಗತಿಸುವುದಾಗಿಹಾಗೂ ರಾಜ್ಯದ ಜನತೆಯ ಪರವಾಗಿ ಇಂತಹ ಐತಿಹಾಸಿಕ ನಿರ್ಣಯವನ್ನು ಕೈಗೊಂಡ ಸರ್ಕಾರದ ಕ್ರಮವನ್ನು ಅಭಿನಂದಿಸುವುದಾಗಿ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದ್ದಾರೆ.

ಎಸ್.ಸಿ,ಎಸ್.ಟಿ. ಹೊರತುಪಡಿಸಿಉಳಿದಯಾವುದೇ ಸಮುದಾಯಗಳ ನಿಖರವಾದ ಮಾಹಿತಿಯನ್ನು ಕೇಂದ್ರ ಸರ್ಕಾರ ಹೊಂದಿಲ್ಲದ ಕಾರಣ ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಇತ್ತೀಚೆಗೆ ಕಾಂಗ್ರೆಸ್ ಪಕ್ಷ ಇದನ್ನು ರಾಜಕೀಯ ಲಾಭಕ್ಕೋಸ್ಕರವಾಗಿ ಬಳಕೆ ಮಾಡಿಕೊಳ್ಳುತ್ತಿರುವುದನ್ನು ಮನಗಂಡು ಮತ್ತು ತನ್ನ ಸಾಮಾಜಿಕ ನೈಜ

ಬದ್ದತೆಯನ್ನು ಜಾರಿಗೆ ತರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿಗಣತಿಯನ್ನೂ ಮಾಡುವ ನಿರ್ಣಯವನ್ನು ತೆಗೆದುಕೊಂಡಿರುವುದು ಐತಿಹಾಸಿಕವಾಗಿದೆ ಎಂದು ಸಂಸದ ಈರಣ್ಣ ಕಡಾಡಿ ಪ್ರಶಂಶಿಸಿದ್ದಾರೆ.

ಕಳೆದ ಐದು ದಶಕಗಳ ಕಾಲ ದೇಶವನ್ನು ಆಳಿದ ಕಾಂಗ್ರೆಸ್ ಯಾವತ್ತೂ ಸಾಮಾಜಿಕ ನ್ಯಾಯದ ಪರ ತನ್ನ ಬದ್ಧತೆಯನ್ನು ತೋರಿಸಲಿಲ್ಲ. ಬದಲಾಗಿ ಜಾತಿ ಜಾತಿಗಳನ್ನು ಎತ್ತಿಕಟ್ಟುವ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಗೆಡವುದರಲ್ಲಿ ಕಾಲಹರಣ ಮಾಡಿದರು.

ಹಲವು ದಶಕಗಳ ಕಾಲದಿಂದ ವೈಜ್ಞಾನಿಕವಾಗಿ ದೇಶಾದ್ಯಂತ ಜಾತಿಗಣತಿ ಸಮೀಕ್ಷೆಗೆ ಯಾವ ಸರ್ಕಾರವೂ ಮುಂದಾಗಿರಲಿಲ್ಲ. ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರ ಸರ್ಕಾರವು ತೆಗೆದುಕೊಂಡಿರುವ ಈ ನಿರ್ಧಾರದಿಂದ ದೇಶದಲ್ಲಿ ಹಿಂದುಳಿದವರು, ಆರ್ಥಿಕವಾಗಿ,ಸಾಮಾಜಿಕವಾಗಿಹಾಗೂಶೈಕ್ಷಣಿಕವಾಗಿ ಹಾಗೂ ಔದ್ಯೋಗಿಕ ಸ್ಥಿತಿಗತಿಗಳನ್ನು ಅರಿಯಲು ಅವರಿಗೆಯೋಜನೆಗಳನ್ನುರೂಪಿಸಿ ಮುಖ್ಯವಾಹನಿಗೆ ತರಲು ತುಂಬಾ ಅನುಕೂಲವಾಗಲಿದೆ ಎಂದರು.

ಜನಗಣತಿ ಜೊತೆಗೆ ಜಾತಿಗಣತಿಯನ್ನು ಮಾಡುವ ಮೂಲಕ ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದೊರೆಯುವಲ್ಲಿ ಸಹಾಯವಾಗುವುದಲ್ಲದೇ ನಿಜವಾದ ರಾಷ್ಟ್ರದ ಅಭ್ಯುದಯದಲ್ಲಿ ಒಂದು ಮಹತ್ತರ ಕೊಡುಗೆಯಾಗಲಿದೆ.

ಇದನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡುವ ಸಾಮರ್ಥ್ಯ ಕೇಂದ್ರ ಸರ್ಕಾರಕ್ಕೆ ಇದ್ದು ಜನ ಕೂಡ ತಾವು ಇದರಲ್ಲಿ ಭಾಗಿಯಾಗುವ ಮೂಲಕ ಇದರ ಲಾಭವನ್ನು ಪಡೆಯಬೇಕಾಗಿ ಸಂಸದರು ವಿನಂತಿಸಿದ್ದಾರೆ.

# ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಸಾಮೂಹಿಕ ಉಪನಯನ ಮನುಷ್ಯನ ಪರಿಪೂರ್ಣತೆಗೆ ಸಂಸ್ಕಾರ ಅಗತ್ಯ: ಸುಧಿಂದ್ರಮಹಾಸ್ವಾಮಿಗಳು



**ಬಾಗಲಕೋಟೆ :** ಮನುಷ್ಯನನ್ನೂ ಹೆಜ್ಜೆ ಹೆಜ್ಜೆಗೆ ಸಂಸ್ಕರಿಸಿ ಶುದ್ದೀಕರಿಸಿ ಪರಿಪೂರ್ಣತೆಯ್ತ್ತ ಕೊಂಡೊಯ್ಯಲು ಸಂಸ್ಕಾರದ ಅಗತ್ಯವಾಗಿದೆ ಎಂದು ನಾಲತವಾಡದ ಬ್ರಹ್ಮಾಂಡಭೇರಿಮಠದ ಪೂಜ್ಯಶ್ರೀ ಸುಧಿಂದ್ರಸ್ವಾಮಿಗಳು ಹೇಳಿದರು. ಅವರು ವಿದ್ಯಾಗಿರಿಯಲ್ಲಿ ಬಾಗಲಕೋಟೆ ತಾಲೂಕಾ ಶ್ರೀ ವಿಶ್ವಕರ್ಮ ನೌಕರರ ಕ್ಷಾಮಾಭಿವೃದ್ಧಿ ಸಂಘ, ವಿಶ್ವಕರ್ಮ ಸಮಾಜ ಅಭಿವೃದ್ಧಿ ಸಂಘ, ವಿಶ್ವಕರ್ಮ ತರುಣ ಸಂಘ, ವಿಶ್ವಕರ್ಮ ಸಮಾಜ ಬಡಿಗತನ ಕಾರ್ಮಿಕರ ಸಂಘ, ಕಾಳಿಕಾಂಬಾ ಮಹಿಳಾ ಮಂಡಳ,

ವಿಶ್ವಕರ್ಮ ಸಮಾಜ ಸಂಘ ಬಾಗಲಕೋಟೆ ಇವರ ಸಹಕಾರದೊಂದಿಗೆ ವಿದ್ಯಾಗಿರಿಯ 13ನೇ ರಸ್ತೆಯಲ್ಲಿರುವ ಕಾಳಿಕಾಂಬಾ ದೇವಸ್ಥಾನದಲ್ಲಿ ಗುರುವಾರ ನಡೆದ ಪ್ರಥಮ ಸಾಮೂಹಿಕ ಉಪನಯನ ಹಾಗೂ ಧಾರ್ಮಿಕ ಸಭೆಯ ಸಾನಿಧ್ಯವನ್ನು ವಹಸಿ ಮಾತನಾಡಿದರು.

ಸಾವಿರಾರು ವರ್ಷಗಳ ಹಿಂದಿಯೇ ಅಲೌಕಿಕ ಬುದ್ದಿಸಂಪನ್ನರಾಗಿದ್ದ ನಮ್ಮ ಭಾರತದ ಋಷಿಮುನಿಗಳು ತಮ್ಮ ತಪ:ಪ್ರಭಾವದಿಂದ ಈ ಸೃಷ್ಟಿಯ ರಹಸ್ಯೆವನ್ನೆ ಭೇದಿಸಿ ಇದರ ಆದಿ, ಅಂತ್ಯ, ಸ್ವರೂಪ, ಸ್ವಭಾವ, ಹುಟ್ಟು, ಸಾವು, ಕರ್ಮ, ಕರ್ಮಫಲ, ಜನ್ಮಜನ್ಮಾಂತರ ಸಿದ್ದಾಂತಗಳನ್ನು ಮಾಡಿದ್ದಾರೆ, ಮನುಷ್ಯಜೀವನಕ್ಕೆ ಸರಿಯಾದ ಮಾರ್ಗಗಳನ್ನು ತೋರಿಸಿಕೊಟ್ಟಿದ್ದಾರೆ, ಮನುಷ್ಯನ ಇಹ–ಪರ ಎರಡನ್ನು ಸಮನ್ವಯಗೊಳಿಸಿದ್ದಾರೆ ಅಲ್ಲದೆ ಮನುಷ್ಯನ ಪರಿಪೂರ್ಣತೆಗೆ ಆಯಾ ಕಾಲಕ್ಕೆ ತಕ್ಕಂತೆ ಸಂಸ್ಕರಿಸಿ ಶುದ್ಧಿಕರಿಸಲು ಹುಟ್ಟಿನಿಂದ ಮರಣದ ವರೆಗೂ ಅನೇಕ ಸಂಸ್ಕಾರಗಳನ್ನು ನೀಡಿದ್ದಾರೆ ಅದರಲ್ಲಿ ಈ ಉಪನಯನವು ಒಂದು, ತಂದೆ ತಾಯಿಗಳಿಂದ ಲಭಿಸುವ ಜನ್ಮದಿಂದ ಕೇವಲ ಮನುಷ್ಯ ಶರೀರವು ಪ್ರಾಪ್ತವಾಗುತ್ತದೆ, ಉಪನಯದಿಂದ ದ್ವಿಜತ್ವವು ಎರಡನೆಯ ಜನ್ಮವೇ ಲಭಿಸುತ್ತದೆ, ಈ ಜನ್ಮದಲ್ಲಿ ವೇಧಾಧ್ಯಯನ ಅಗತ್ಯ, ಸಂಧ್ಯಾವಂದನೆ, ಗಾಯತ್ರಿ ಮಂತ್ರ ಪಠಣ ತಪ್ಪದೆ ಮಾಡಲೇಬೇಕು, ಪ್ರತಿಯೊಬ್ಬ ವ್ಯಕ್ತಿಯ ಸಮಗ್ರ ಭಾವಿ ಜೀವನವನ್ನೆ ರೂಪಿಸುವ ಸಂಸ್ಕಾರವು ಇದಾಗಿರುವುದರಿಂದ ಉಪನಯನವು ಅತ್ಯಂತ ಅವಶ್ಯಕ ಅನಿವಾರ್ಯವೂ ಆದ ಸಂಸ್ಕಾರವಾಗಿದೆ.

ಸಾನಿಧ್ಯ ವಹಸಿದ ಇನ್ನೂರ್ವ ಶ್ರೀಗಳಾದ ವಿಶ್ವನಾಥಸಾಮಿಗಳು ಮಹಾಪುರುಷ ಮಾತನಾಡಿ ಈ ವಿಶ್ವಸೃಷ್ಟಿಯಲ್ಲಿ ಹುಟ್ಟಿ ವಾಸಿಸುವ ಪ್ರಾಣಿವರ್ಗದಲ್ಲಿ ಮನುಷ್ಯ ಜೀವಿಯು ಸರ್ವಶ್ರೇಷ್ಠವೆಂದೆ ಪರಿಗಣಿಸಲ್ಪಟ್ಟಿದ್ದಾನೆ, ತನ್ನ ಬೌದ್ದಿಕಬಲದಿಂದ ಆತನು ಈ ವಿಶ್ವದ ವಿವಿಧ ವಸ್ತುಶಕ್ತಿಗಳ ರಹಸ್ಯವನ್ನು ಬೇದಿಸುತ್ತ ತನ್ನ ಬಾಳ್ವೆಯನ್ನು ಸುಗಮಗೊಳಿಸಲು ನಿರಂತರವೂ ಶ್ರಮಿಸುತ್ತಿದ್ದಾನೆ ಇವೆಲ್ಲವೂ ಗುರು ಹಿರಿಯರು ನೀಡಿದ ಸಂಸ್ಕಾರಗಳಿಂದ ಸಾಧ್ಯವಾಗಿವೆ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ವಿದ್ಯಾಗಿರಿ ವಿಶ್ವಕರ್ಮ ಸಮಾಜ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ವಸಂತರಾವ ಕಮ್ಮಾರ ಮಾತನಾಡಿ ಉಪನಯನ ಆಚರಣೆಗಳ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿಶ್ವರ್ಕಮ ನೌಕರರ ಕ್ಷೇಮಾಭಿವೃದ್ಧಿ ಸಂಘದಅಧ್ಯಕ್ಷರಾದದೇವೇಂದ್ರಅಗಳತಕಟ್ಟಿ ಮಾತನಾಡಿ ನಮ್ಮ ನೌಕರರ ಸಂಘ ಹಾಗೂ ಸಮಾಜದ ವಿವಿಧ ಸಂಘಟನೆಗಳ ಸಹಕಾರದಿಂದ ಸುಮಾರು 25 ವಟುಗಳ ಸಾಮೂಹಿಕ ಉಚಿತ ಬ್ರಹ್ಮೋಪದೇಶವನ್ನು ನೇರವೇರಿಸಲಾಗಿದೆ, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಚಿತ ಸಾಮೂಹಿಕ ಉಪನಯನ ನಡೆಸುವ ಉದ್ದೇಶ ಹೋಂದಲಾಗಿದೆ ಎಂದರು.

ಕಾರ್ಯಕ್ರಮದ ವೇದಿಕೆ ಮೇಲೆ ತಾಲೂಕ ವಿಶ್ವಕರ್ಮ ಸಮಾಜ ಬಡಿಗತನ ಕಾರ್ಮಿಕರ ಸಂಘದ ಅಧ್ಯಕ್ಷ ಬಸವರಾಜ ಬಡಿಗೇರ, ತರುಣ ಸಂಘದ ಅಧ್ಯಕ್ಷ ಯಂಕಪ್ಪ ಬಡಿಗೇರ, ನಾಗರಾಜ ಕಮ್ಮಾರ, ಬಸವರಾಜ ಬರಗಿ, ಪ್ರಕಾಶ ಪತ್ತಾರ, ಜಗನ್ನಾಥ ಪತ್ತಾರ, ಮಹೇಶಕುಮಾರ ಪತ್ತಾರ.ಎ.ಸಾಶಿವ, ಡಾ.ಬೀಮಪ್ಪ ಬಡಿಗೇರ, ರಾಘವೇಂದ್ರ ಕಮ್ಮಾರ, ಮಹಾದೇವ ಪತ್ತಾರ, ಅಪ್ಪಾಸಾಬ ಬಡಿಗೇರ, ನಿರ್ಮಲಾ ಪತ್ತಾರ, ವಿಜಯಲಕ್ಷ್ಮೀ ಪತ್ತಾರ, ಕಾಳಪ್ಪ ಬಡಿಗೇರ, ರುಕಮಣ್ಣ ಪಂಚಾಳ, ಪ್ರಶಾಂತ ಕರಡಿಗುಡ್ಡ, ಗುರುರಾಜ ಅಗಳತಕಟ್ಟಿ, ಶಂಕರ ಪತ್ತಾರ, ಮೌನೇಶ ಕಮ್ಮಾರ, ಸೇರಿದಂತೆ ಅನೇಕರು ಭಾಗವಹಸಿದ್ದರು.

ಧಾರ್ಮಿಕ ಸಭೆಗೂ ಮುಂಚೆ ಶ್ರೀ ವೀರೇಶಾಚಾರ್ಯ ದೇವಲಾಪುರ ಅವರ ಪೌರೋಹಿತ್ಯದಲ್ಲಿ ಸುಮಾರು 25 ಜನ ವಟುಗಳ ಸಾಮೂಹಿಕ ಬ್ರಹ್ಮೋಪದೇಶ ಜರುಗಿತು,

ನಂತರ ಎಲ್ಲ ವಟುಗಳ ಮೇರವಣಿಗೂ ಕುದರೆ ಹಾಗೂ ಒಂಟೆಗಳ ಜೋತೆಗೂಡಿ ವಿದ್ಯಾಗಿರಿಯ ಪ್ರಮುಖ ರಸ್ತೆಗಳಲ್ಲಿ ಭವ್ಯ ಮೇರವಣಿಗೆ ಜರುಗಿತು, ಸಮಾಜದ ಎಲ್ಲ ಭಾಂಧವರು ಬಾಗವಹಿಸಿದ್ದರು.

# ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ

**ತೇರದಾಳ :** ಹಿಂದುಳಿದ ಸಮಾಜ ಆರ್ಥಿಕವಾಗಿ ಮುಂದೆ ಬರಬೇಕು ಎಂದರೆ ಮೊದಲು ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು ಎಂದು ಬೆಂಗಳೂರಿನ ಸಿವಿಲ್ ನ್ಯಾಯಾಧೀಶ ಮಹೋನ ಪೋಳ ಹೇಳಿದರು.

ಬಸವ ಜಯಂತಿ ನಿಮಿತ್ಯ ಇಲ್ಲಿನ ಕುಂಬಾರ ಗಲ್ಲಿಯ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಂಡಿದ್ದ ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ಸಮಾಜದ ಪ್ರತಿಭೆಗಳಿಗೆ ಏಪ9ಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ತಂತ್ರಜ್ಞಾನ ಯುಗದಲ್ಲಿ ಶಿಕ್ಷಣ ಬಹಳಷ್ಟು ಪ್ರಾಮುಖ್ಯತೆ ಪಡೆಯುತ್ತಿದೆ.

ಸರಕಾರಗಳು ಕೂಡ ಶೈಕ್ಷಣಿಕ ಪ್ರಗತಿಗೆಸಾಕಷ್ಟುಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಆದ್ದರಿಂದ ಸಮಾಜ ಬಾಂಧವರು ಸದರಿ ಯೋಜನೆಗಳ ಸದುಪಯೋಗ ಪಡೆದುಕೊಂಡು ಉಜ್ವಲ ಭವಿಷ್ಯ ಕಾಣುವಂತೆ ಸಲಹೆ ನೀಡಿದರು.

ನಾಗರಾಳ ಪರಮಾನಂದ ಆಶ್ರಮ ಸಿದ್ಧಾರೂಢ ಮಠದ ಜ್ಞಾನೇಶ್ವರ ಶ್ರೀ ಹಾಗೂ ಅನಂತಾನಂದ ಶ್ರೀ ಮಾತನಾಡಿ ಕುಂಬಾರ ಸಮಾಜ ಅತ್ಯಂತ ಶ್ರಮಜೀವಿಯಾಗಿದ್ದು, ಕಾಯಕವೇ ಕೈಲಾಸ ಎಂಬ ಬಸವಣ್ಣನ ವಾಣಿಯನ್ನು ಪಾಲಿಸುತ್ತ ಬದುಕುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಪುರಸಭೆಅಧ್ಯಕ್ಷೆಶಿಲ್ಪಾರೋಡಕರ, ರಮೇಶ ಕುಂಬಾರ, ವಿಠ್ಠಲ ತಟ್ರಿ, ಸಚಿನ ಕೊಡತೆ, ಶಂಕರ ಕುಂಬಾರ, ಕಲ್ಲಪ್ಪ ಕುಂಬಾರ, ರಾಯಪ್ಪ ಕುಂಬಾರ, ರಮೇಶ ಮುರಗುಂಡಿ, ಗಟಿಗೆಪ್ಪ ಕುಂಬಾರ, ಸುರೇಶ ಮುರಗುಂಡಿ, ಡಾ. ರಾಜು ಕುಂಬಾರ ಹಾಜರಿದ್ದರು.

# ಬಸವೇಶ್ವರ ವಾಣಿಜ್ಯ ಕಾಲೇಜಿನ ಎನ್.ಎಸ್.ಎಸ್. ಶಿಬಿರಾರ್ಥಿಗಳಿಂದ ಡೆಂಗೂ ಜಾಗೃತಿ




**ಬಾಗಲಕೋಟೆ :** ನಗರದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಬಾಗಲಕೋಟೆಯ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಅಡಿಯಲ್ಲಿ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರವನ್ನು ದತ್ತು ಗ್ರಾಮ ಮಲ್ಲಾಪುರದಲ್ಲಿ ಆಯೋಜಿಸಲಾಗಿದ್ದು, ಬಾನುವಾರ ಎನ್. ಎಸ್.ಎಸ್. ಶಿಬಿರಾರ್ಥಿಗಳಿಂದ ಗ್ರಾಮದಲ್ಲಿ ಡೆಂಗೂ ಜಾಗೃತಿ ಮೂಡಿಸಲಾಯಿತು.

ಆರೋಗ್ಯ ಇಲಾಖೆಯ ಸಹಯೋಗದೊಂದಿಗೆಗ್ರಾಮದಲ್ಲಿ"ಡೆಂಗೂ ಜಾಗೃತಿ " ಕುರಿತು ಜಾತಾ ಮಾಡಲಾಯಿತು. ಈ ಸಂದರ್ಭದಲ್ಲಿ ಡೇಂಜರ್ ಡೇಂಜರ್, ಡೆಂಗು ಡೇಂಜರ್", "ಕಡಿತ ಚಿಕ್ಕದು ಬಿಟಿ ದೊಡ್ಡದು", " ನಿಂತ ನೀರು ಸೊಳ್ಳೆಗಳ ತವರು" ಎಂಬ ಘೋಷವಾಕ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ ಜನದಟ್ಟನೆ ಇರುವ ಸ್ಥಳಗಳಲ್ಲಿ ಬೀದಿ ನಾಟಕಗಳನ್ನು ಡೆಂಗ್ಯೂ ಜ್ವರಕ್ಕೆ ಸಂಬಂಧಿಸಿದ ಪ್ರಸ್ತುತಪಡಿಸಲಾಯಿತು.

ಇದೇ ಸಂದರ್ಭದಲ್ಲಿ ರಕ್ತದಾನಕ್ಕೆ ಸಂಬಂಧಿಸಿದ ಘೋಷವಾಕ್ಯಗಳಾದ " ರಕ್ತದಾನ ಮಹಾದಾನ" , " ರಕ್ತದಾನ ಮಾಡಿ ಜೀವ ಉಳಿಸಿ" ಕೂಗಲಾಯಿತು ಅಲ್ಲದೆ ಮತದಾನ ಜಾಗೃತಿಗೆ ಸಂಬಂಧಿಸಿದಂತೆ " ಮತದಾನ ನಮ್ಮ ಹಕ್ಕು" ಎಲ್ಲರೂ ತಪ್ಪದೇ ಮತದಾನ ಮಾಡಿ "ಎಂಬ ಘೋಷಣೆಗಳನ್ನು ಕೂಗಲಾಯಿತು . ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಗನ್ನಾಥ್ ವಿ. ಚೌವ್ಹಾಣ, ಎನ್.ಎಸ್.ಎಸ್ ಅಧಿಕಾರಿ ಡಾ. ಎಂ. ಎಂ. ಹುದ್ದಾರ, ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿ ಕೆ. ಎಫ್. ಮಾಯಾಚಾರಿ, ಶಿಬಿರದ ಸಂಘಟಕರಾದ ಡಾ. ರವಿ ಬಳಗೆರಿ, ಸಂಘಟಕಿ ಕುಮಾರಿ ಶ್ರುತಿ ಬಡಿಗೇರ, ಅಂಗನವಾಡಿ ಆಶಾ ಕಾರ್ಯಕರ್ತರು, ಎನ್ ಎಸ್ ಎಸ್ ಸ್ವಯಂಸೇವಕರು, ಗ್ರಾಮದ ಜನರು ಭಾಗವಹಿಸದ್ದರು.

# ಸಮಾಜದಲ್ಲಿ ಗೊಂದಲ ಸೃಷ್ಠಿ ಬೇಡ: ಕರನಂದಿ



**ಗುಳೇದಗುಡ್ಡ :** ಶಿವದಾಸಮಾರ್ಯ ಶಿವಸಿಂಪಿ ಸಮಾಜ ಅಭಿವೃದ್ಧಿ ಸಂಸ್ಥೆ ಅಧಿಕೃತವಾಗಿದ್ದು ಪಟ್ಟಣದಲ್ಲಿ ಇನ್ನೊಂದು ಸಂಸ್ಥೆ ಹುಟ್ಟಿಕೊಂಡು ಸಮಾಜದಲ್ಲಿ ಹಾಗೂ ಸಾರ್ವಜನಿಕರಲ್ಲಿ ಗೊಂದಲ ಸೃಷ್ಠಿ ಮಾಡುತ್ತಿದೆ. ಇದು ಸಮಾಜದ ಬೆಳವಣಿಗೆಗೆ ಪೂರಕವಲ್ಲವೆಂದು ಸಮಾಜದ ಅಧ್ಯಕ್ಷ ಮಹಾಲಿಂಗಪ್ಪ ಕರನಂದಿ ಹೇಳಿದರು.

ಅವರು ಪಟ್ಟಣದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಒಂದೆ ಸಮಾಜದ ಹೆಸರಿನ ಎರಡು ಸಂಸ್ಥೆ ಹುಟ್ಟುಕೊಂಡರೆ ಸಮಾಜದಲ್ಲಿ ಒಡಕು ಮೂಡುತ್ತದೆ. ಜನರಲ್ಲಿಯೂ ಕೂಡಾ ಗೊಂದಲ ಉಂಟಾಗುತ್ತದೆ. ಶಿವದಾಸಮಾರ್ಯ ಶಿವಸಿಂಪಿ ಸಮಾಜ ಅಭಿವೃದ್ಧಿ ಸಂಸ್ಥೆಯೇ ಅಧಿಕೃತವಾಗಿದ್ದು, ಈ ಸಂಸ್ಥೆಯ ಮೂಲಕ ಕಳೆದ 7 ವರ್ಷಗಳಿಂದ ಸಮಾಜದಲ್ಲಿ ಅಭಿವೃದ್ಧಿಪರ ಕೆಲಸಗಳನ್ನು ಮಾಡಲಾಗುತ್ತಿದೆ ಎಂದರು.

ಈ ಹಿಂದೆ ಸಮಾಜದ ಕೆಲವು ಹಿರಿಯರು ಸಮಾಜದ ಅಭಿವೃದ್ಧಿಗಾಗಿ ಸಭೆ ಕರೆಯಲಾಗಿದೆ ಎಂದು ಪುಸ್ತಕದಲ್ಲಿ ಸಹಿ ಮಾಡಿಸಿಕೊಂಡು ಹೋಗಿದ್ದರು. ಅನಾರೋಗ್ಯದ ಕಾರಣ ಸಭೆಗೆ ಹೋಗಿರಲಿಲ್ಲ. ಆ ಸಂದರ್ಭದಲ್ಲಿ ಸಮಾಜದ ಬೆರಳೆಣಿಕೆ ಜನರು ಕೂಡಿಕೊಂಡು ಸಮಾಜದ ಅಭಿವೃದ್ಧಿ ಚಿಂತಿಸದೇ ಅಲ್ಲಿಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ನನ್ನ ಪರವಾಣಿಗೆ ಇಲ್ಲದೇ ತಮ್ಮನ್ನೂ ಕೂಡಾ ಗೌರವಾಧ್ಯಕ್ಷರೆಂದು ಪರಿಗಣಿಸಿದ್ದಾರೆ. ಇದು ಸಮಾಜಕ್ಕೆ ತಪ್ಪು ಸಂದೇಶ ನೀಡುವ ಬೆಳವಣಿಗೆಯಾಗಿದೆ. ನನ್ನ ಸಹಿ ಕೂಡಾ ದುರುಪಯೋಗ ಪಡಿಸಿಕೊಂಡಿದ್ದಾರೆ. ಇದರಲ್ಲಿ ಕೆಲವರು ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಮಹಾಲಿಂಗಪ್ಪ ಕರನಂದಿ ದೂರಿದರು. ಈಗ ಹುಟ್ಟಿಕೊಂಡಿರುವ ಶಿವಸಿಂಪಿ ಸಮಾಜ ಸಂಸ್ಥೆ ಹಾಗೂ ಅದರ ಪದಾಧಿಕಾರಿಗಳು ಅಸಿಂಧುವಾಗಿದೆ. ನಮ್ಮದು ಅಂದರೆ ಶಿವದಾಸಮಾರ್ಯ ಶಿವಸಿಂಪಿ ಸಮಾಜ ಅಭಿವೃದ್ಧಿ ಸಂಸ್ಥೆ ನೊಂದಣಿಯಾಗಿ ಅಧಿಕೃತವಾಗಿದೆ. ಕಳೆದ 7 ವರ್ಷಗಳಿಂದ ತಾಲೂಕು, ಜಿಲ್ಲಾ ಮಟ್ಟದ ಸಮಾವೇಶಗಳನ್ನು ಮಾಡಿ ಸಮಾಜದ ಬೆಳವಣಿಗೆಯ ಕೆಲಸ ಮಾಡಲಾಗಿದೆ. ಕೆಲವರು ಸಮಾಜಕ್ಕೆ ಬರುವ ಅನುದಾನ ತಪ್ಪಿಸುವ ಕೆಲಸ ಮಾಡಿ ಅನಧಿಕೃತವಾದ ಸಮಾಜದ ಹೆಸರಿನಲ್ಲಿ ಇನ್ನೊಂದು ಸಂಸ್ಥೆ ಕಟ್ಟುತ್ತಿರುವುದು ಸರಿಯಾದ ಬೆಳವಣಿಗೆಯಲ್ಲ. ಇದು ಸಮಾಜಕ್ಕೆ ವಿರುದ್ಧವಾಗಿದೆ. ಜನರು ಹಾಗೂ ಸಮಾಜ ಬಾಂಧವರು ಶಿವದಾಸಮಾರ್ಯ ಶಿವಸಿಂಪಿ ಸಮಾಜ ಅಭಿವೃದ್ಧಿ ಸಂಸ್ಥೆಯೊಂದಿಗೆ ಎಂದಿನಂತೆ ಸಹಾಯ, ಸಹಕಾರ ನೀಡಿ ಸಂಸ್ಥೆ, ಸಮಾಜ ಇನ್ನಷ್ಟು ಪ್ರಗತಿ ಹೊಂದಲು ಸಹಕಾರ ನೀಡಬೇಕೆಂದು ಅಧ್ಯಕ್ಷ ಮಹಾಲಿಂಗಪ್ಪ ಕರನಂದಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆ ಉಪಾಧ್ಯಕ್ಷ ಅಶೋಕ ಅಥಣಿ, ಕಾರ್ಯದರ್ಶಿ ಮುತ್ತು ಮೊರಬದ, ವಿಜಯ ಹಡಗಲಿ, ಸಹನಾ ಗಂಗಾವತಿ, ಸಂಗಪ್ಪ ಚೆಟ್ಟೇರ, ರಾಚಣ್ಣ ನಾಗಠಾಣ, ವಿರಸಂಗಪ್ಪ ಕರಡಿ, ಸಿದ್ದು ಅಥಣಿ, ರಾಚಣ್ಣ ಮಂಟಾ ಇತರರು ಇದ್ದರು.

## ಸಹಜ ಶಿವಯೋಗ, ಧರ್ಮಗುರು ಬಸವ ಸ್ಮರಣೋತ್ಸವ, ಸನ್ಮಾನ ಕಾರ್ಯಕ್ರಮ

# ವಿಶ್ವಗುರು ಬಸವಣ್ಣ ಸಮಾಜದ ಬೆಳಕು: ರಾಜನಾಳ



**ಗುಳೇದಗುಡ್ಡ :** 12ನೇ ಶತಮಾನದಲ್ಲಿ ಸಮಾಜಕ್ಕೆ ಕಂಟಕವಾಗಿದ್ದ ಅಸಮಾನತೆ, ಮೇಲು, ಕೀಳು, ಜಾತಿ ಬೇಧ, ವರ್ಗ, ವರ್ಣ ಬೇಧವನ್ನು ಹೋಗಲಾಡಿಸಿಸಮಾಜಕ್ಕೆಬೆಳಕಾಗಿದ್ದಾರೆ. ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮಾನತೆ ಮೂಡಿಸಿದರು. ಬಸವಣ್ಣವರ ವಚನಗಳಲ್ಲಿ ಸಮಾಜ ಸುಧಾರಣೆಯ ಅಂಶಗಳು ಅಡಗಿವೆ. ಬಸವಣ್ಣನವರ ತತ್ವ ಸಿದ್ಧಾಂತಗಳು ಇಂದಿಗೂ ನಮಗೆ ಪ್ರಸ್ತುತವಾಗಿವೆ ಎಂದು ಬಸವ ಕೇಂದ್ರದ ಚಿಂತಕ ಸುರೇಶ ರಾಜನಾಳ ಹೇಳಿದರು.

ಅವರು ಪಟ್ಟಣದ ಬಸವ ಕೇಂದ್ರದಲ್ಲಿ ಧರ್ಮಗುರು ಬಸವ ಸ್ಮರಣೋತ್ಸವ ಹಾಗೂ ಸಾಮೂಹಿಕ ಸಹಜ ಶಿವಯೋಗ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಣ್ಣವರ ವಚನ ಸಾಹಿತ್ಯ ಮನುಷ್ಯನ ಬದುಕನ್ನು ಬದಲಾಯಿಸುವ ಶಕ್ತಿ ಹೊಂದಿದೆ. ಜನರ ಜೀವನಕ್ಕೆ ಹತ್ತಿರವಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿದ್ದ ಕಂದಾಚಾರವನ್ನು ಹೋಗಲಾಡಿಸಿ ಬಸವಣ್ಣನವರು ಸಮಾಜಕ್ಕೆ ವಚನಗಳ ಮೂಲಕ ಆದರ್ಶ ಸಂದೇಶ ನೀಡಿದರು ಎಂದರು.

ಪ್ರಾಧ್ಯಾಪಕ ಬಿ.ವೈ.ಗೌಡರ ಅನುಭಾವ ಮಂಡಿಸಿ, ಪ್ರತಿಯೊಬ್ಬರೂ ವಚನ ಸಾಹಿತ್ಯವನ್ನು ಅಧ್ಯಯನ ಮಾಡಬೇಕು. ವಚನಗಳಲ್ಲಿ ಅಗಾಧವಾದ ಜ್ಞಾನ ಅಡಗಿದೆ. ಬಸವಣ್ಣ ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿನ ಅಸ್ಪೃಶ್ಯತೆ, ಮೂಢನಂಬಿಕೆ, ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಬಹಳಷ್ಟು ಶ್ರಮಿಸಿದರು. ಬವಣ್ಣನವರ ವಚನಗಳು ಸಮಾಜ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಬಸವ ಕೇಂದ್ರದ ಅಧ್ಯಕ್ಷ, ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷ ಸಿದ್ದಲಿಂಗಪ್ಪ ಬರಗುಂಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲಸಲು ಅಣ್ಣ ಬಸವಣ್ಣ, ಅಕ್ಕಮಹಾದೇವಿ ವಚನ ಸಾಹಿತ್ಯದ ತತ್ವ, ಸಿದ್ಧಾಂತಗಳು ಪೂರಕವಾಗಿವೆ. ಪ್ರತಿಯೊಬ್ಬರೂ ಕಂದಾಚಾರ, ಮೌಢ್ಯತೆಯಿಂದ ಮುಕ್ತರಾಗಿ ಸಮಾಜದಲ್ಲಿ ಸೌಹಾರ್ಧತೆ ಮೂಡಿಸಬೇಕೆಂದರು.

ಇದೇ ಸಂದರ್ಭದಲ್ಲಿ ಸುರೇಶ ರಾಜನಾಳ, ಬಿ.ವೈ.ಗೌಡರ, ಕಸಾಪ ಅಧ್ಯಕ್ಷ ಎಚ್.ಎಸ್.ಘಂಟಿ, ಸಂಸ್ಕೃತ ಶಿಕ್ಷಕಿ ಮಾಲಾ ರಾಜನಾಳ ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಶರಣ ಧ್ವಜಾರೋಹಣ ನಂತರ ಬಸವ ಬಂಧುಗಳಿಂದ ಸಾಮೂಹಿಕ ಇಷ್ಟಲಿಂಗ ಪೂಜೆ ನಡೆಯಿತು.

ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಮಂದಿರದ ಶರಣಮ್ಮ ತಾಯಿ, ಬಸವ ಕೇಂದ್ರ ಗೌರವಾಧ್ಯಕ್ಷ ಎಚ್.ಎಸ್.ಹುಳಪಲ್ಲೇದ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ರಾಚಣ್ಣ ಕೆರೂರ, ಉಪಾಧ್ಯಕ್ಷೆ ಗೀತಾ ತಿಪ್ಪಾ, ಸಿದ್ದಲಿಂಗಪ್ಪ ಬರಗುಂಡಿ, ಮಹಾದೇವಯ್ಯ ನೀಲಕಂಠಮಠ, ಮುರುಗೇಶ ಶೇಖಾ, ಮಲ್ಲಿಕಾರ್ಜುನ ಶೀಲವಂತ, ಸಂಜಯ ಬರಗುಂಡಿ, ಹುಚ್ಚೇಶ ಸಿಂದಗಿ, ಬಸವರಾಜ ಬರಗುಂಡಿ, ಪುತ್ರಪ್ಪ ಬೀಳಗಿ, ಜಯಶ್ರೀ ಬರಗುಂಡಿ, ರೇಖಾ ಘಟ್ಟದ, ನಿರ್ಮಲಾ ಬರಗುಂಡಿ, ಶ್ರೀಕಾಂತ ಗಡೇದ, ಶಿವಾನಂದ ಸಿಂದಗಿ, ಮೋಹನ ಕರನಂದಿ, ದ್ರಾಕ್ಷಾಯಣಿ ಹಿರೇಮಠ ಇತರರು ಇದ್ದರು.

# ಅಕ್ಷಯ ತೃತೀಯದಂದು ಬಾಲ್ಯವಿವಾಹದ ವಿರುದ್ಧ ಹೋರಾಡಲು ಬಾಗಲಕೋಟೆ ಜಿಲ್ಲೆಯಲ್ಲಿ ಧರ್ಮಗುರುಗಳು ಮತ್ತು ರೀಚ್ ಸಂಸ್ಥೆಯಿಂದ ಅಭಿಯಾನ ಮೂಲಕ ಬಾಲ್ಯವಿವಾಹ ಮುಕ್ತ ಜಿಲ್ಲೆ ಮಾಡಲು ಕರೆ

ದಿ: 30/04/2025ರಂದು ಬಾಲ್ಯವಿವಾಹ ಮುಕ್ತ ಭಾರತ (ಅಒಈಖ) ಅಭಿಯಾನದ ಭಾಗವಾಗಿ, ರೀಚ್ ಸಂಸ್ಥೆ ಮತ್ತು ವಿವಿಧ ಧರ್ಮಗಳ ಧರ್ಮಗುರುಗಳು ಬಾಲ್ಯವಿವಾಹವನ್ನು ತಡೆಯುವ ಉದ್ದೇಶದಿಂದ ಸಮೂಹ ಜಾಗೃತಿಯ ಅಭಿಯಾನಕ್ಕೆ ಕೈಜೋಡಿಸಿದ್ದಾರೆ. ಈ ಮೂಲಕ ಮುಂಬರುವ ಮದುವೆ ಕಾಲವಾದ ಅಕ್ಷಯ ತೃತೀಯ ದಿನದಂದು ಯಾವುದೇ ಬಾಲ್ಯವಿವಾಹ ನಡೆಯದಂತೆ ನೋಡಿಕೊಳ್ಳಲಾಗುತ್ತದೆ.

ಧರ್ಮಗುರುಗಳು ಮತ್ತು ರೀಚ್ ಸಂಸ್ಥೆ ತಮ್ಮ ಜಂಟಿ ಘೋಷಣೆಯಲ್ಲಿ, ಬಾಲ್ಯವಿವಾಹ ಗಂಭೀರ ಅಪರಾಧವಾಗಿದ್ದು, ವಿವಾಹ ನಡೆಸುವುದುಅಥವಾಸಹಾಯಮಾಡುವವರು ಕಾನೂನು ಬಾಹಿರ ಶಿಕ್ಷೆಗೆ ಒಳಗಾಗುತ್ತಾರೆ ಎಂದುಸ್ಪಷ್ಟಪಡಿಸಿದ್ದಾರೆ. ಧರ್ಮಗುರುಗಳಿಂದ ದೊರೆತ ಭಾರೀ ಬೆಂಬಲದಿಂದ ಈ ಅಕ್ಷಯ ತೃತೀಯದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಯಾವುದೇ ಬಾಲ್ಯವಿವಾಹವಾಗದಂತೆ ಮಾಡಲು ಸಾಧ್ಯವೆಂದು ನಿರೀಕ್ಷಿಸಲಾಗಿದೆ. ಇದರಿಂದ ಮಕ್ಕಳ ಹಕ್ಕುಗಳನ್ನು ರಕ್ಷಿಸುವತ್ತ ಸಮುದಾಯದಬದ್ಧತೆಯೂಪೋರಕವಾಗಿದೆ. ಜಸ್ಟ್ ರೈಟ್ಸ್ ಫಾರ್ ಚಿಲ್ಡ್ರನ್ (JRC) ನೇತೃತ್ವದ ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನದ ಭಾಗವಾಗಿ ದೇಶದಾದ್ಯಂತ 416 ಜಿಲ್ಲೆಗಳಲ್ಲಿ 250ಕ್ಕೂ ಹೆಚ್ಚು ಸ್ವಯಂ ಸೇವಾ ಸಂಸ್ಥೆಗಳ ಜಾಲದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಅಕ್ಷಯ ತೃತೀಯ ಹಾಗೂ ಮದುವೆ ಕಾಲಕ್ಕೆ ಸಂಬಂಧಿಸಿದಂತೆ ಬಾಗಲಕೋಟೆ ಜಿಲ್ಲೆಯಲ್ಲಿ ಎಲ್ಲಾ ಧರ್ಮಗಳ ಧರ್ಮಗುರುಗಳು, ರೀಚ್ ಸಂಸ್ಥೆ ನೇತೃತ್ವದ ಜಾಗೃತಿ ಅಭಿಯಾನಕ್ಕೆ ಬೆಂಬಲ ನೀಡಿದ್ದಾರೆ. ಯಾವುದೇ ದೇವಾಲಯ, ಮಸೀದಿ, ಚರ್ಚ್ ಅಥವಾ ಗುರ್ದ್ವಾರಾದಲ್ಲಿ ಬಾಲ್ಯವಿವಾಹ ನಡೆಯದಂತೆ ನೋಡಿಕೊಳ್ಳಲಾಗುತ್ತದೆ.

ಅಭಿಯಾನದ ಭಾಗವಾಗಿ, ಎಲ್ಲಾ ಧಾರ್ಮಿಕ ಸ್ಥಳಗಳಲ್ಲಿ “ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ. “ಇಲ್ಲಿ ಯಾವುದೇ ಕಾರಣಕ್ಕೂ 18 ವರ್ಷದೊಳಗಿನ ಹೆಣ್ಣು ಮಕ್ಕಳ ಮತ್ತು 21 ವರ್ಷದೊಳಗಿನ ಗಂಡು ಮಕ್ಕಳ ಮದುವೆಗೆ ಅಥವಾ "ಬಾಲ್ಯವಿವಾಹಕ್ಕೆ” ಅವಕಾಶವಿಲ್ಲ, ಕಾನೂನಿನಂತೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ.”ಎಂಬಸ್ಪಷ್ಟಸಂದೇಶವಿರುವ ಪೋಸ್ಟರ್‌ಗಳು ಹಾಗೂ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಎಖಅ ಬೆಂಬಲಿತ ಅಒಈಖ ಅಭಿಯಾನವು 2030ರೊಳಗೆ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಗುರಿಯೊಂದಿಗೆ ಕಾನೂನು ಹಸ್ತಕ್ಷೇಪ, ಜನಜಾಗೃತಿ ಮತ್ತು ಸಮುದಾಯದ ಸಕ್ರಿಯತೆಯಿಂದ ಕಾರ್ಯನಿರ್ವಹಿಸುತ್ತಿದೆ.




Just Rights for Children (JRC) ಎಂಬುದು ಮಕ್ಕಳ ರಕ್ಷಣೆಗೆ ವಿಶ್ವದ ಅತಿ–ದೊಡ್ಡ ಜಾಲವಾಗಿದ್ದು, ಈ ಅಭಿಯಾನದ ಹಿಂದಿನ ಪ್ರೇರಕ ಶಕ್ತಿಯಾಗಿದೆ. ಕಳೆದ ಎರಡು ವರ್ಷಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಬಾಲ್ಯವಿವಾಹಗಳನ್ನು ತಡೆಯಲಾಗಿದೆ ಮತ್ತು 5 ಕೋಟಿ ಜನರು ಬಾಲ್ಯವಿವಾಹದ ವಿರುದ್ಧ ಪಣ ತೊಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ರೀಚ್ ಸಂಸ್ಥೆ, ಜಿಲ್ಲಾಡಳಿತ, ಧರ್ಮಗುರುಗಳು ಹಾಗೂ ಸಮುದಾಯದೊಂದಿಗೆ ಕಾರ್ಯನಿರ್ವಹಿಸಿ ಬಾಲ್ಯವಿವಾಹಗಳನ್ನು ತಡೆಯಲು ಸಾಧ್ಯವಾಗಿದೆ. ಎಲ್ಲಾ ಸಹಭಾಗಿತ್ವದ ಸ್ವಯಂ ಸೇವಾ ಸಂಸ್ಥೆಗಳು JRC ಸ್ಥಾಪಕ ಭುವನ್ ರಿಭು ಅವರ 2023ರ ಪುಸ್ತಕ When Children Have Children: Tipping Point to End Child Marriage ನಲ್ಲಿ ವಿವರಿಸಲಾದ ತಂತ್ರಾಧಾರಿತ ಮಾರ್ಗಸೂಚಿಯಂತೆ ಕೆಲಸ ಮಾಡುತ್ತಿವೆ. ಈ ಮಾರ್ಗಸೂಚಿಗಳು 2024ರ ಭಾರತೀಯ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನೂ ಅನುಸರಿಸುತ್ತವೆ.

“ಇದು ಬಾಲ್ಯವಿವಾಹ ಎಂಬ ಅಘಾತಕಾರಿ ಅಪರಾಧದ ವಿರುದ್ಧದ ನಮ್ಮ ಹೋರಾಟದಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ರೀಚ್ ಸಂಸ್ಥೆಯ ಸಂಯೋಜಕರು ಕುಮಾರರವರು ಧರ್ಮಗುರುಗಳಿಂದ ಬಂದ ಭಾರೀ ಬೆಂಬಲವನ್ನು ಸಮರ್ಥಿಸಿಕೊಂಡಿದ್ದಾರೆ.

ಇನ್ನೂ ದೇಶದಲ್ಲಿ ಬಾಲ್ಯವಿವಾಹ ವಿರೋಧಿ ಅಗತ್ಯ ಜಾಗೃತಿ ಕೊರತೆಯಾಗಿದೆ. ಬಹುತೇಕ ಜನರಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ (ಪಿಸಿಎಂಎ), 2006ರ ಪ್ರಕಾರ ಇದು ಶಿಕ್ಷಾರ್ಹ ಅಪರಾಧವೆಂಬ ಅರಿವು ಇಲ್ಲ. ಇದರಲ್ಲಿ ಭಾಗವಹಿಸುವ ಅಥವಾ ಸೇವೆ ನೀಡುವ ಎಲ್ಲರಿಗೂ 2 ವರ್ಷದ ಜೈಲು ಶಿಕ್ಷೆ ಮತ್ತು 1 ಲಕ್ಷ ರೂಪಾಯಿ ದಂಡ ಅಥವಾ ಎರಡೂ ವಿಧಿಸಲಾಗುತ್ತದೆ. ಬಾಲ್ಯವಿವಾಹವಾದ ಗಂಡಿನ ಮೇಲೆ ಪೋಕ್ಸೋ ಅಡಿ ಪೋಲೀಸ್ ದೂರು ದಾಖಲಾಗುತ್ತದೆ.

ಇದರಲ್ಲಿ ಬಾಗವಹಿಸಿದವರಿಗೆ, ಅವಕಾಶ ನೀಡಿದವರು, ಅಡುಗೆ ಮಾಡುವವರು, ಅಲಂಕಾರಕಾರರು, ಮದುವೆ ಮಂಟಪದ ಮಾಲಿಕ, ಬ್ಯಾಂಡ್ ಮ್ಯೂಸಿಕ್ ನೀಡುವವರು, ಲಗ್ನ ಪತ್ರಿಕೆ ಮುದ್ರಣ–ಕಾರರು ಹಾಗೂ ಮದುವೆ ನೆರವೇ–ರಿಸುವ ಪಂಡಿತ್ ಅಥವಾ ಮೌಲವಿಯರೂ ಅಪರಾಧದಲ್ಲಿ ಭಾಗಿಯಾದವರಾಗುತ್ತಾರೆ. ಈ ಕಾರಣದಿಂದಲೇ ಪಂಡಿತ್, ಮೌಲಿವಿ, ಪುರೋಹಿತರ ನಡುವೆ ಜಾಗೃತಿ ಅಭಿಯಾನ ನಡೆಸಲು ನಿರ್ಧರಿಸಲಾಯಿತು.

ಬಾಲ್ಯವಿವಾಹ ಅಂದರೆ ಮಕ್ಕಳಿಗೆ ಬಲಾತ್ಕಾರ ಮಾಡಿದಂತೆ. 18 ವರ್ಷಕ್ಕೂ ಕಡಿಮೆ ವಯಸ್ಸಿನ ಹುಡುಗಿಯರೊಂದಿಗೆ ಮದುವೆಯಾದಲ್ಲಿ ಲೈಂಗಿಕ ಸಂಬಂಧ ಹೊಂದಿದರೆ, ಅದು ಪಾಕ್ಸೋ ಕಾಯ್ದೆಯಡಿ ಬಲಾತ್ಕಾರ ಎಂದು ಪರಿಗಣಿಸಲಾಗುತ್ತದೆ.

ಸಂತೋಷಕರ ಸಂಗತಿ ಎಂದರೆ ಇಂದು ಪಂಡಿತರು ಮತ್ತು ಮೌಲವಿಗಳು ಇದನ್ನು ಅರಿತಿದ್ದು, ಈ ಅಭಿಯಾನಕ್ಕೆ ಬೆಂಬಲ ನೀಡುತ್ತಾ ತಮ್ಮಿಂದಲೇ ಬಾಲ್ಯವಿವಾಹ ತಡೆಯಲು ಮುಂದೆ ಬರುತ್ತಿದ್ದಾರೆ. ಪುರೋಹಿತರೇ ಬಾಲ್ಯವಿವಾಹ ನೆರವೇ–ರಿಸಲು ನಿರಾಕರಿಸಿದರೆ, ಈ ಅಪರಾಧವನ್ನು ದೇಶದಿಂದ ಪ್ರಾರಂಭದಿಂದಲೇ ನಿರ್ಮೂಲನೆ ಮಾಡಬಹುದು, “ಮುನಿಗಳು ಮತ್ತು ಧರ್ಮಗುರುಗಳಿಗೆ ನಾವು ತಿಳಿಸಿದ್ದೇವೆ, ಬಾಲ್ಯವಿವಾಹವು ಅತ್ಯಾಚಾರಕ್ಕೆ ದಾರಿ ಮಾಡಿಕೊಡುವ ಅಪರಾಧವಾಗಿದೆ. ಯಾವುದೇ ಧರ್ಮವೂ ಈ ಅಪರಾಧಕ್ಕೆ ಬೆಂಬಲ ನೀಡುವುದಿಲ್ಲ. ಅವರ ಬೆಂಬಲವಿಲ್ಲದೆ ಯಾವುದೇ ಸಮುದಾಯವೂ ಬಾಲ್ಯವಿವಾಹ ಮಾಡಲಾಗದು.

ಆದ್ದರಿಂದ ಅವರ ಸ್ಪಷ್ಟ ಬೆಂಬಲದಿಂದ ಈ ವರ್ಷ ಜಿಲ್ಲೆಯಲ್ಲಿ ಅಕ್ಷಯ ತೃತೀಯದಂದು ಯಾವುದೇ ಬಾಲ್ಯವಿವಾಹವಿಲ್ಲದ ನಿಜವಾದ ಶುಭ ದಿನವಾಗಲಿದೆ.”

ಎಂದು ನಾವು ನಂಬಿದ್ದೇವೆ.” ? ಕುಮಾರ್, ಸಂಯೋಜಕರು, ರೀಚ್ ಸಂಸ್ಥೆರವರು ಹೇಳಿದರು.

**ವರದಿ : ಕುಮಾರ್**
**9945712918**

## ಬಸವನ ಬಾಗೇವಾಡಿಯಲ್ಲಿ ಬಸವ ಜ್ಯೋತಿ ಯಾತ್ರೆಗೆ ಚಾಲನೆ

**ವಿಜಯಪುರ** : ಬಸವ ಜಯಂತಿ ನಿಮಿತ್ತ ವಿಶ್ವಗುರು ಬಸವಣ್ಣನವರು ಹುಟ್ಟೂರು ಬಸವನ ಬಾಗೇವಾಡಿಯಿಂದ ವಿಜಯಪುರ ಬಸವೇಶ್ವರ ವೃತ್ತದವರೆಗೆ ಬೆಂಗಳೂರಿನಲ್ಲಿ ನೆಲೆಸಿರುವ ವಿಜಯಪುರ ಮೂಲದ ಉದ್ಯಮಿ ಬಿ ಬಿ ಪಾಟೀಲ ನೇತೃತ್ವದಲ್ಲಿ ಬಸವಜ್ಯೋತಿ ಯಾತ್ರೆಗೆ ಮಂಗಳವಾರ ಮಧ್ಯರಾತ್ರಿ ಬಾಗೇವಾಡಿ ವಿರಕ್ತ ಮಠದ ಪೂಜ್ಯ ಸಿದ್ದಲಿಂಗ ಸ್ವಾಮೀಜಿ ಚಾಲನೆ ನೀಡಿದರು.

ಬಸವೇಶ್ವರ ಜ್ಯೋತಿಯನ್ನು ಬಾಗೇವಾಡಿಯಿಂದ ಇಂಗಳೇಶ್ವರ, ಮಸಬಿನಾಳ ಮತ್ತು ಉಕುಮನಾಳ ಮಾರ್ಗವಾಗಿ ನಗರದ ಶಿವಗಿರಿವರೆಗೆ 42 ಕಿಮಿ ದೂರವನ್ನು ಬೆಂಗಳೂರಿನ ಜಗದೀಶ ದಮಾನಿಯಾ, ಸಂದೀಪ ಡಿಯೋ, ಮೋಹನ, ಪ್ರಸಾದ ಶೃಂಗೇರಿ ಮತ್ತು ಹುಬ್ಬಳ್ಳಿಯ ವಿವಿಟ್, ವಿಸಿಜಿ ಗ್ರೂಪ್ ನ ಪ್ರವೀಣ ಚೌರ್, ಶ್ರೀಕಾಂತ ಅಂಗಡಿ, ಸಂದೀಪ್ ಮಡಗೊಂಡ, ಸೋಮು ಮಠ, ವಿನಯ ಪಾಟೀಲ, ರಘು ಸಾಲೋಟಗಿ ಮತ್ತು ಕಲಬುರಗಿಯ ವೀರಣ್ಣ ಕೌಲಗಿ ಓಡುತ್ತ ಬಂದಿದ್ದಾರೆ. ಅಲ್ಲದೆ, ವಿಸಿಜಿ ಸದಸ್ಯರಾದ ಅಬಕಾರಿ ಇಲಾಖೆ ಅಧೀಕ್ಷಕ ಲಗಮಣ್ಣ ಸಲಗಾರೆ ಹಾಗು ಪುತ್ರ ಧನುಷ್ ಮತ್ತು ಅಬಕಾರಿ ಇಲಾಖೆ ಅಪ್ಪು ಭೈರಗೊಂಡ ಮತ್ತು ಅವರ ಪುತ್ರರಾದ ಅಮಿತ ಮತ್ತು ಅಪೇಕ್ಷಾ. ಗುರುಶಾಂತ ಕಾಪಸೆ, ಸೋಮಶೇಖರ ಸ್ವಾಮಿ, ಮುತ್ತಣ್ಣ ಬಿರಾದಾರ, ಸಿದ್ದು ನಾಯ್ಕೋಡಿ, ಡಾ. ಶಂಕರಗೌಡ ಪಾಟೀಲ, ಡಾ. ರವಿ ಚೌಧರಿ ಮತ್ತು ಅಮೋಘಸಿದ್ಧ ಬಸನಾಳ. ಇಡೀ ರಾತ್ರಿ ಸೈಕಲ್ ತುಳಿಯುವ ಮೂಲಕ ಸಾಥ್ ನೀಡಿದರು.

ಇದುವರೆಗೆ ವಿಜಯಪುರಕ್ಕೆ ಸೀಮಿತವಾಗಿದ್ದ ಬಸವಯಾತ್ರೆಗೆ ವಿಸಿಜಿ ತಂಡ ಹೆಚ್ಚು ಸದಸ್ಯರು ಭಾಗವಹಿಸುವ ಮೂಲಕ ಈ ಜ್ಯೋತಿ ಯಾತ್ರೆಗೆ ಕಳೆ ತಂದಿದ್ದಾರೆ. ನೆರೆಯ ಬೆಳಗಾವಿ, ಕಲಬುರಗಿಯ ಈ ಬಾರಿ ಓಟಗಾರರು ಭಾಗವಹಿಸ್ದಿದರು. ಮುಂದಿನ ಬಾರಿ ಬಸವಯಾತ್ರೆಯನ್ನು ಭಕ್ತಿ ಬಂಡಾರಿ ಬಸವಣ್ಣ ಯಾತ್ರೆಯನ್ನು ಹೆಚ್ಚೆಚು ಸದಸ್ಯರನ್ನು ಒಳಗೊಂಡು ಆಚರಣೆ ಮಾಡಲಾಗುವುದು ಎಂದು ವಿಸಿಜಿ ಸೈಕ್ಲಿಂಗ್ ಗ್ರೂಪ್ ಅಧ್ಯಕ್ಷ ಡಾ.ಮಹಾಂತೇಶ ಬಿರಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪತ್ರಕರ್ತ ಬಾಬುರಾವ್‌ಗೆ ಮಾಧ್ಯಮ ರತ್ನ ಸಿರಿ ಪ್ರಶಸ್ತಿಯ ಗರಿ



**ಪತ್ರಿಕೋಧ್ಯಮವೆಂಬುದು ಜ್ಞಾನ ತುಂಬುವ ಸಮುದ್ರವಿದ್ದಹಾಗೆ ಇದರಲ್ಲಿ ಏಷ್ಟು ಆಳವಾಗಿ ಸೇವೆ ಸಲ್ಲಿಸಿದರೂ ಕಲಿಯುವದು ಇನೂ ಉಳಿದಿರುತ್ತದೆ ನನ್ನ 52 ವರ್ಷದ ಪತ್ರಿಕೋಧ್ಯಮದ ಸೇವೆಯನ್ನು ಗುರುತಿಸಿ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯವತಿಂದ ನೀಡುತ್ತಿರುವದು ಖುಷಿ ತಂದಿದೆ.**
**– ಬಾಬುರಾವ್ ಕುಲಕರ್ಣಿ**
**ಹಿರಿಯ ಪತ್ರಕರ್ತರು ವಿಜಯಪುರ**

**ತಾಳಿಕೋಟೆ** : ತಾಳಿಕೋಟೆಯ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯವತಿಂದ ಕೊಡಮಾಡಲಾಗುವ ಮಾಧ್ಯಮ ರತ್ನ ಸಿರಿ ಪ್ರಶಸ್ತಿಗೆ ವಿಜಯಪುರದ ಹಿರಿಯ ಪತ್ರಕರ್ತರಾದ ಬಾಬುರಾವ್ ಕುಲಕರ್ಣಿ ಅವರು ಆಯ್ಕೆಗೊಂಡಿದ್ದು ಪತ್ರಕರ್ತರ ಬಳಗ ವೃಂದಕ್ಕೆ ಸಂತಸವನ್ನುಂಟು ಮಾಡಿದೆ.

ಹಿರಿಯ ಪತ್ರಕರ್ತರಾದ ಬಾಬುರಾವ್ ಕುಲಕರ್ಣಿ ಅವರು ಸುಮಾರು 52 ವರ್ಷಗಳಿಂದಲೂ ನಾಡಿನ ವಿವಿಧ ಪತ್ರಿಕೆಗಳಲ್ಲಿ ಪತ್ರಕರ್ತರಾಗಿ, ಲೇಖಕರಾಗಿ, ಯುವ ಪತ್ರಕರ್ತರಿಗೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಾ ಬಂದವರಾಗಿದ್ದಾರೆ ಪತ್ರಿಕೋಧ್ಯಮದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಹಾಗೂ ಕನ್ನಡಪರ ಹೋರಾಟಗಳಲ್ಲಿಯೂ ತಮ್ಮ ಕೊಡುಗೆಯನ್ನು ಸಲ್ಲಿಸಿದ ವ್ಯಕ್ತಿಯಾಗಿದ್ದಾರೆ ನವೋದಯ ಕನ್ನಡ ದಿನ ಪತ್ರಿಕೆಯ ಜಿಲ್ಲಾ ವರಧಿಗಾರರಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯ ಪತ್ರಕರ್ತ ಬಾಬುರಾವ್ ಕುಲಕರ್ಣಿ ಅವರು 1982ರಲ್ಲಿ ಕೋಕಾಕ ಚಳುವಳಿ ಜಾರಿಗಾಗಿ ರಚಿತವಾಗಿದ್ದ ಯುವಜನ ಕ್ರೀಯಾ ಸಮಿತಿಯ ವಿಜಯಪುರ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿ ಹೋರಾಟದಲ್ಲಿ ಪಾಲ್ಗೊಂಡು ಜೈಲೋಭರೋ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಇವರು ಕಸಾಪದ ಗೌರವ ಜಿಲ್ಲಾ ಕಾರ್ಯದರ್ಶಿಯಾಗಿ ಜಿಲ್ಲಾ ಯುವ ಲೇಖಕರ ವೇದಿಕೆಯ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಇವರು ನೆಲ, ಜಲ ವಿಷಯವಾಗಿ ಅನ್ಯಾಯವಾದಾಗ ಪ್ರತಿಭಟನೆಯ ನೇತೃತ್ವದ ಜೊತೆಗೆರೈಲು ರೋಕೋ ದಲ್ಲಿ ಭಾಗವಹಿಸಿ ಯಶಸ್ವಿ ಕಂಡವರಾಗಿದ್ದಾರೆ ಪತ್ರಿಕೆಯ ಮೂಲಕ ಹರಿತವಾದ ಲೇಖನಗಳ ಮೂಲಕ ಜಿಲ್ಲೆಯ ಮತ್ತು ನಾಡಿನ ಅಲ್ಲದೇ ಜನರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲವಂತಹ ಅನೇಕ ಲೇಖನಗಳು ಬದಲಾವಣೆ ತಂದಿದ್ದು ಇವರು ಬರೆದ ಮುಳ್ಳಲ್ಲ ಹೂವು ಕಥೆಯು 1986ರಲ್ಲಿ ದೂರದರ್ಶನ ಮತ್ತು ಚಂದನವಾಹಿನಿಯಲ್ಲಿ ಪ್ರಸಾರಗೊಂಡಿದ್ದು ಇವರಿಗೆ ರಾಜ್ಯಮಟ್ಟದ ವಿಶ್ವಮಾನ್ಯ ಕನ್ನಡಿಗ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಸುವರ್ಣ ಕನ್ನಡಿಗ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕೆ.ಎಸ್.ಎನ್.ಪ್ರಶಸ್ತಿ, ಜೀವಮಾನ ಸಾಧನೆ ಪ್ರಶಸ್ತಿ, ವಿಶ್ವಮಾನ್ಯ ಕನ್ನಡಿಗ ಪ್ರಶಸ್ತಿ, ಒಳಗೊಂಡು ಅನೇಕ ಪ್ರಶಸ್ತಿಗಳು ಇವರ ಮುಡಿಗೇರಿದ್ದು ಸದ್ಯ ಇವರ ನಿಸ್ಪಕ್ಷಪಾತ ಪತ್ರಿಕೋಧ್ಯಮದ ಸೇವೆಯನ್ನು ಗುರುತಿಸಿ ಮೇ. 3 ರಂದು ತಾಳಿಕೊಟೆ ಪಟ್ಟಣದ ಶ್ರೀ ವಿಠ್ಠಲ ಮಂದಿರದ ಸಭಾ ಭವನದಲ್ಲಿ ನಡೆಯಲಿರುವ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯ ವಾರ್ಷಿಕೋತ್ಸವ ಹಾಗೂ 2 ತಿಂಗಳ ಉಚಿತ ನೃತ್ಯ ತರಬೇತಿ ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ವತಿಯಿಂದ ಮಾಧ್ಯಮ ರತ್ನ ಸಿರಿ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

## ಶ್ರೀ ಸಿದ್ದೇಶ್ವರ ಶ್ರೀಗಳು ಈ ಭಾಗದ ಜನರಿಗೆ ಸಂಸ್ಕಾರ ನೀಡಿದ್ದಾರೆ: ಶಾಸಕ ಯಶವಂತರಾಯಗೌಡ ಪಾಟೀಲ

**ಇಂಡಿ** : ನಡೇದಾಡುವ ದೇವರಾದ ಶ್ರೀಸಿದ್ದೇಶ್ವರ ಮಹಾಸ್ವಾಮಿಗಳು ಜ್ಞಾನದ ವಿಶ್ವವಿಧ್ಯಾಲಯವಿದ್ದಂತೆ ಅವರ ವಾಣಿಯ ಮೂಲಕ ಈ ಭಾಗದ ಜನರಿಗೆ ಹೃದಯ ಶ್ರೀಮಂತಿಕೆಯ ಜೊತೆ ಸಂಸ್ಕಾರಯುತ ಬದುಕಿಗೆ ದಾರಿದೀಪವಾಗಿದ್ದಾರೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.



ಲೋಕೊಪಯೋಗಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿಜಯಪೂರ ಸನ್ 2023–24ನೇಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ವಿಶೇಷನುಧಾನ ಶ್ರೀಸಿದ್ದೇಶ್ವರ ಸ್ವಾಮಿಗಳ ಅವರ ಸಭಾ ಭವನ ನಿರ್ಮಾಣ(ಗಾಣಿಗಸಮುದಾಯದಭವನ) ಭೂಮಿ ಪೂಜಾ ನೆರವೇರಿಸಿ ಮಾತನಾಡಿದ ಅವರು ಶ್ರೀಸಿದ್ದೇಶ್ವರ ಮಹಾಸ್ವಾಮಿಗಳು ವಿಶ್ವಕೋಶ ಇದ್ದಂತೆ ಅವರು ಜೀವಿತ ಅವಧಿಯಲ್ಲಿ ಯಾವುದೇ ಸೌಧದಲ್ಲಿ ಕಾಣಬೇಡಿ ಇಡೀ ಚರಾಚರ ವಸ್ತುಗಳಲ್ಲಿ ದೇವರಿದ್ದಾನೆ ಎಂಬ ಅವರವಾಣಿಯಾಗಿತ್ತು ಈ ಸಮುದಾಯ ಭವನ ಕಟ್ಟಬೇಕಾದರೆ ಅನೇಕ ಜೀಜ್ಞಾಷೆಗಳು ಇದ್ದವು ಆದರೆ ಇದು ವಿಧ್ಯಾರ್ಥಿಗಳ, ಸಮುದಾಯದ ಹಿತ ಗಮನಿಸಿ ಈ ಸೌಧ ಕಟ್ಟಿದರೆ ಸದಾ ಮಹಾಸ್ವಾಮಿಗಳ ಸ್ಮರಿಸಿದಂತಾಗುತ್ತದೆ ಎಂಬ ಸಂಕಲ್ಪದಿಂದ ಸಮುದಾಯ ಭವನ ನಿರ್ಮಿಸಲಾಗುತ್ತಿದೆ.

ಶ್ರೀಸಿದ್ದೇಶ್ವರ ಮಹಾಸ್ವಾಮಿಗಳು ರೈತರಿಗೆ ಒಂದು ಹನಿ ನೀರು ಕೊಡಿ ಎರಡನೆ ಕ್ಯಾಲಿಪೋರ್ನಿಯಾ ಆಗುತ್ತದೆ ಎಂದಿದರು ಈ ಹಿಂದೆ ತಾಲೂಕಿನ ಸಾವಳಸಂಗ ಗುಡ್ಡಕ್ಕೆ ಅರಣ್ಯ ಇಲಾಖೆಯವರು ಗಿಡಮರಗಳ ನೆಡುವ ಕಾರ್ಯಕ್ರಮಕ್ಕೆ ಪೂಜ್ಯ ಅಪ್ಪಾಜಿಯವರನ್ನು ಬರಮಾಡಿಕೊಂಡಾಗ ಈ ಎತ್ತರದ ಬೆಟ್ಟದಲ್ಲಿ ನೀರು ಹಾಯಿಸಿ ಎಂದು ಆದೇಶಮಾಡಿರುವದರಿಂದ್ದ ಅವರ ಸಂಕಲ್ಪದಂತೆ ಶ್ರೀರೇವಣಸಿದ್ದೇಶ್ವರ ಯಾತ ನೀರಾವರಿ ಯೋಜನೆ ಪ್ರಗತಿಯಲ್ಲಿದೆ ಇಂದು ಮತಕ್ಷೇತ್ರದ ಅನೇಕ ಯೋಜನೆಗಳಿಗೆ ಪೂಜ್ಯ ಸ್ವಾಮಿಜೀಗಳ ಹೆಸರು ಇಡಲಾಗಿದೆ ಇದರ ಉದ್ದೇಶ ಅವರ ಹೆಸರು ಸದಾ ಅಜರಾಮರವಾಗಿರಲಿ ಎಂಬ ಉದ್ದೇಶವಾಗಿದೆ.5ಕೋಟಿರೂವೆಚ್ಚದಭವನ ಒಳ್ಳೇಯ ಗುತ್ತಿಗೆದಾರರಿಗೆ ಕೊಡಲಾಗಿದೆ ಕೇವಲ 9 ತಿಂಗಳಲ್ಲಿ ಲೋಕಾರ್ಪಣೆಯಾಗಿ ವಿಧ್ಯಾರ್ಥಿಗಳ ಹಾಗೂ ಸಮುದಾಯದಗಳ ಕೆಲಸ ಕಾರ್ಯಗಳಿಗೆ ಈ ಸೌಧ ಉಪಯೋಗವಾಗಲಿ ಎಂದರು.

ಕಾಂಗ್ರೇಸ್ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಮಾತನಾಡಿ ಶಾಸಕ ಯಶವಂತರಾಯಗೌಡ ಪಾಟೀಲ ಪೂಜ್ಯ ಅಪ್ಪಾಜೀಯರ ಮೇಲೆ ಇಟ್ಟ ಪ್ರೀತಿ, ವಿಶ್ವಾಸ ಹಾಗೂ ಸಮುದಾಯದ ಮೇಲಿರುವ ಅಭಿಮಾನದಿಂದ ಇಂತಹ ಕಟ್ಟಡ ಆಗಿದೆ ಇಡೀ ಸಮುದಾಯ ಅವರ ಪರವಾಗಿ ಸದಾ ಇರಬೇಕು ಎಂದರು. ಲೋಕೋಪಯೋಗಿ ಇಲಾಖೆಯಅಧಿಕಾರಿ ದಯಾನಂದ ಮಠ ಪ್ರಾಸ್ತಾವಿಕ ಮಾತನಾಡಿದರು.

ಮಾತೋಶ್ರೀ ಸುಗಲಮ್ಮಾತಾಯಿ , ಶಂಕರಾನಂದ ಮಹಾಸ್ವಾಮಿಗಳು ದಿವ್ಯಸಾನಿಧ್ಯವಹಿಸಿದರು.

ಸಮುದಾಯದ ಅಧ್ಯಕ್ಷ ಎ.ಎಸ್ ಗಾಣಿಗೇರ, ಭೀಮನಗೌಡ ಪಾಟೀಲ, ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ, ಪ್ರೋ ಸಿದ್ದಲಿಂಗ ಹಂಜಗಿ,ಪಿಕೆಪಿಎಸ್‌ನಾದಬಿ.ಕೆಅಧ್ಯಕ್ಷಡಿ.ಎಸ್ ಅವುಜಿ, ಬಿ.ಕೆ ಮಸಳಿ, ಸುಭಾಷ ಹಿಟ್ನಳ್ಳಿ, ರಾಮು ಯಂಕಚಿ, ಅಪ್ಪಣ್ಣಾ ಕಲ್ಲೂರ,ಡಾ. ಅಶೋಕ ಪಾಟೀಲ,ಮನೋಜ ಪಾಟೀಲ, ಭೀಮಾಶಂಕರ ಗಡ್ಡದ, ಶಿವಯೋಗೆಪ್ಪ ಚನಗೊಂಡ, ಅಪ್ಪು ಅಡಗಲ್, ಇಲಿಯಾಸ ಬೋರಾಮಣಿ, ವಿನೋದ ಗಾಣಿಗೇರ, ಶಿಕ್ಷಕ ಪಾಸೋಡಿ,ಜಾವೇದ ಮೋಮಿನ್ ಉಪಸ್ಥಿತರಿದ್ದರು.ಬಸವರಾಜ ಗೋರನಾಳ, ನಿರೂಪಿಸಿ ವಂದಿಸಿದರು.

## ಬಸವಣ್ಣನವರ ವಚನಗಳಲ್ಲಿ ಮಾನವ ಸಂಕಟ, ದುಃಖಗಳಿಗೆ ಪರಿಹಾರ: ಬೂದಾಳು

**ವಿಜಯಪುರ** : ಮಾನವ ಸಂಕಟ ಮತ್ತು ದುಃಖಗಳಿಗೆ ಬಸವಣ್ಣನವರ ವಚನಗಳಲ್ಲಿ ಪರಿಹಾರ ಸಿಗುತ್ತದೆ ಎಂದು ಸಾಹಿತಿ ಮತ್ತು ಸಿಂಡಿಕೇಟ್ ಸದಸ್ಯ ಡಾ. ಎಸ್. ನಟರಾಜ ಬೂದಾಳು ಅಭಿಪ್ರಾಯಪಟ್ಟರು.



ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಸಾಂಸ್ಕೃತಿಕ ನಾಯಕ ಮತ್ತು ವಿಶ್ವಗುರು ಶ್ರೀ ಬಸವೇಶ್ವರರ 892 ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಚಿಂತನೆ ಮುಖ್ಯ ಉದ್ದೇಶವಾಗಿತ್ತು. ಈ ಉದಾತ್ತ ಉದ್ದೇಶವನ್ನು ಬುದ್ಧನಲ್ಲಿಯೂ ಹಾಗೂ ಡಾ. ಅಂಬೇಡ್ಕರ್ ಅವರಲ್ಲಿಯೂ ಕಾಣಬಹುದು. ಬಸವಣ್ಣ ಕೇವಲ ಶರಣನಲ್ಲ, ವ್ಯಕ್ತಿಯಲ್ಲ, ಅವರು ಒಂದು ವಿದ್ಯಮಾನ. ಅವರು ಹೆಣ್ಣು ಮಕ್ಕಳ ಧಾರ್ಮಿಕ ಕ್ಷೇತ್ರದ ನಿರಾಕರಣೆ, ಜಾತಿ–ಲಿಂಗ ಭೇದದ ವಿರುದ್ಧ ಹೋರಾಟ, ಅಸ್ಪೃಶ್ಯತೆಯ ನಿರಾಕರಣೆ ಮತ್ತು ಬಾಹ್ಯಾಚಾರದ ತಿರಸ್ಕಾರಕ್ಕೆ ಒತ್ತಡ ಕೊಟ್ಟು ಒಂದು ಶ್ರೇಷ್ಠ ಸಾಮಾಜಿಕ ಚಳವಳಿಗೆ ಉತ್ತೇಜನ ನೀಡಿದರು ಎಂದರು.

ಇದೇ ಸಂದರ್ಭದಲ್ಲಿ ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ಸಮಾಜದ ವೈದ್ಯ, ವಚನಗಳ ಲಿಖಿತ ಸಂವಿಧಾನದ ಶಿಲ್ಪಿ ಬಸವಣ್ಣ. ಸಂಕೋಲೆಗಳನ್ನು ಸೃಷ್ಟಿ ಮಾಡುವ ದುಷ್ಟ ಪ್ರಾಣಿ ಮನುಷ್ಯ ಎಂದು ಹೇಳುತ್ತಾ, ಸ್ತ್ರೀ ಸಮಾನತೆಗಾಗಿ 12ನೇ ಶತಮಾನದಲ್ಲಿ ಹೋರಾಟ ಮಾಡಿ ಮಹಿಳಾ ವಿವಿ ಸ್ಥಾಪನೆಗೆ ಬಸವಣ್ಣ ಕಾರಣರಾದರು ಎಂದರು.

ಕಾರ್ಯಕ್ರಮದಲ್ಲಿ ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಮ್.ಚಂದ್ರಶೇಖರ ಮಾತನಾಡಿ, ಜಾತಿ ವ್ಯವಸ್ಥೆ, ಸಾಮಾಜಿಕ ತಾರತಮ್ಯ ಮತ್ತು ಮೂಢನಂಬಿಕೆಗಳ ವಿರುದ್ಧ ಬಸವಣ್ಣನವರು ಹೋರಾಟ ನಡೆಸುತ್ತಾ "ಅನುಭವ ಮಂಟಪ"ವನ್ನು ಸ್ಥಾಪಿಸಿದರು. ಪ್ರತಿಯೊಬ್ಬರ ದೇಹದಲ್ಲಿ ಹರಿಯುವ ರಕ್ತ ಒಂದೇ ಎಂಬ ಸತ್ಯವನ್ನು ಒತ್ತಿ ಹೇಳುತ್ತಾ, ಬೇಧಭಾವವಿಲ್ಲದೇ ಎಲ್ಲರೂ ಬಸವಣ್ಣನವರ ಕಾಯಕ ತತ್ವವನ್ನು ಅನುಸರಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಬಸವೇಶ್ವರ ಅಧ್ಯಯನ ಪೀಠದ ಸಂಯೋಜಕ ಪ್ರೊ.ರಾಜಕುಮಾರ ಪಿ. ಮಾಲೀಪಾಟೀಲ್ ಮಾತನಾಡಿ, ಬಸವಣ್ಣನವರ ವಚನಗಳು ಹಣ್ಣು, ಕಾಯಿ, ಎಲೆಗಳಿಂದ ತುಂಬಿದ ಮರದಂತೆ ಎಲ್ಲ ವರ್ಗದ ಜನರಿಗೆ ನೆರಳಾಗಿ, ಧ್ವನಿ ನೀಡುವ ಪ್ರಜಾಪ್ರಭುತ್ವದ ಬೀಜವಾಗಿವೆ. ಪ್ಲೇಟೋನ ಆದರ್ಶ ರಾಜ್ಯದ ಪರಿಕಲ್ಪನೆಗಳಂತೆಯೇ ಬಸವಣ್ಣನವರ ವಚನಗಳಲ್ಲಿಯೂ ಸಮಾನತೆಯ, ನ್ಯಾಯದ ಮತ್ತು ನೈತಿಕತೆಗಳನ್ನು ಕಾಪಾಡುವ ಬಲವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ. ಮಾತನಾಡಿ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸಿದ ಮಹಾನ್ ಮಾನವತಾವಾದಿ ಬಸವಣ್ಣ, ತನ್ನ ಚಿಂತನೆಗಳ ಮೂಲಕ ಅನುಭವ ಮಂಟಪದ ರೂಪದಲ್ಲಿ ಇತಿಹಾಸದ ಅಪರೂಪದ ದಾಖಲೆಯೊಂದನ್ನು ರಚಿಸಿದರು. ವಿಶ್ವಕ್ಕೆ ಮಾನವತೆ ನೀಡಿದ ದೇಶ ನಮ್ಮದು ಎಂಬ ಹೆಮ್ಮೆಪಡುವ ಸಂಸ್ಕೃತಿಯನ್ನು ಅವರು ರೂಪಿಸಿದರು. ವಿದ್ಯಾರ್ಥಿಗಳು ಬಸವಣ್ಣನವರ ವಚನಗಳನ್ನು ಓದಿ ವೈಚಾರಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಅವು ಮಾನವೀಯ ಮೌಲ್ಯಗಳ ಬೆಳವಣಿಗೆಗೆ ದಾರಿ ತೋರಿಸುತ್ತವೆ ಎಂದರು.

ಕಾರ್ಯಕ್ರಮದಲ್ಲಿ ವಚನ ಸ್ಪರ್ಧೆಯಲ್ಲಿ ವಿಜೇತರಾದ ಸವಿತಾ ಚಿಗುರಿ, ಲಕ್ಷ್ಮಿ ?ಮ ಕಾತ್ರಾಳ, ಭವಾನಿ ಅಂಗಡಿ, ಐಶ್ವರ್ಯ ಬಿರಾದಾರ ವಿದ್ಯಾರ್ಥಿನಿಯರು ಸನ್ಮಾನದೊಂದಿಗೆ ಬಹುಮಾನ ಪಡೆದರು.

## ನಾಡಿನ ಒಳಿತಿಗಾಗಿ ಬಸವಣ್ಣನ ಕೊಡುಗೆ ಅಪಾರ


**ತೇರದಾಳ** : ಹನ್ನೆರಡನೇ ಶತಮಾನದಲ್ಲಿಯೇ ನಾಡಿನ ಜನತೆಯ ಒಳಿತಿಗಾಗಿ ಸಮಾನತೆ ಸಾರುವ ಮೂಲಕ ವಿಶ್ವಗುರು ಎನಿಸಿಕೊಂಡ ಬಸವಣ್ಣನವರ ಕೊಡುಗೆ ಅಪಾರವಾಗಿದೆ ಎಂದು ಚಿಮ್ಮಡ ವಿರಕ್ತಮಠದ ಪ್ರಭುಶ್ರೀ ಹೇಳಿದರು.

ಬಸವ ಜಯಂತಿ ನಿಮಿತ್ಯ ಇಲ್ಲಿನ ಬಸವ ಸಮಿತಿ ಹಮ್ಮಿಕೊಂಡಿದ್ದ ಪಲ್ಲಕ್ಕಿ ಉತ್ಸವ ಹಾಗೂ ಎತ್ತುಗಳ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಬಸವಣ್ಣ ಕೇವಲ ಒಂದು ಸಮುದಾಯಕ್ಕೆ ಮೀಸಲಾದವರು ಅಲ್ಲ. ಆದ್ದರಿಂದಲೇ ಅವರಿಗೆ ವಿಶ್ವಗುರು ಎಂದು ಬಿರುದು ನೀಡಲಾಗಿದೆ. ಅವರ ಆದರ್ಶಗಳಲ್ಲಿ ನಾವು ಎಂದು ಸಮಾಜ ಮುನ್ನಡೆಸಿಕೊಂಡು ಹೋಗಬೇಕಾಗಿದೆ ಎಂದು ಹೇಳಿದರು. ಹಿರಿಯಾರದ ರಾಮಣ್ಣ ಹಿಡಕಲ್, ಅಪ್ಪು ಮಂಗಸೂಳಿ, ರಮೇಶ ಪಟ್ಟಣಶೆಟ್ಟಿ, ಶ್ರೀಶೈಲ ಮೋದಿ, ಸಂತೋಷ ಜಮಖಂಡಿ, ಸಿದ್ದು ಅಮ್ಮಣಗಿ, ಮಹಾಂತೇಶ ಪಂಚಾಕ್ಷರಿ, ಅಲ್ಲಯ್ಯ ದೊಡಮನಿ, ಈಶ್ವರ ಯಲ್ಲಟ್ಟಿ, ಸುಭಾಸ ಗಾತಾಡೆ, ಪ್ರಮೋದ ಸೊಟ್ಟಿ, ಬಸವರಾಜ ಪಟ್ಟಣಶೆಟ್ಟಿ, ಅರ್ಜುನ ಖ್ಯಾತಗೊಂಡ, ರಾಮಣ್ಣ ಹೊಸಮನಿ, ನಿಂಗಪ್ಪ ಮಲಾಬದಿ ಇನ್ನಿತರರು ಉಪಸ್ಥಿತರಿದ್ದರು.

## ಡಿ.ಕೆ.ಸುರೇಶ್ ಪತ್ನಿ ಎಂದು ಹೇಳಿಕೊಂಡ ಮಹಿಳೆಯ ವಿಡಿಯೋ ವೈರಲ್

**ಬೆಂಗಳೂರು** : ರಾಮನಗರ ಜಿಲ್ಲೆಯ ಮಹಿಳೆಯೊಬ್ಬರು ತಮನ್ನು ತಾವು ಪದೇ ಪದೇ ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಪತ್ನಿ ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹರಿಬಿಡುತ್ತಿರುವುದು ವೈರಲ್ ಆಗುತ್ತಿದೆ.



ಮಹಿಳೆ ಸಾಮಾಜಿಕ ಜಾಲತಾಣದಲ್ಲಿ ತಮ ಹೆಸರನ್ನು ಪವಿತ್ರ ಎಂದು ಉಲ್ಲೇಖಿಸಿದ್ದು, ಬಯೋದಲ್ಲಿ ಪವಿತ್ರ ಡಿ.ಕೆ.ಸುರೇಶ್ ದೊಡ್ಡ ಆಲನಹಳ್ಳಿ ಎಂದು ಬರೆದುಕೊಂಡಿದ್ದಾರೆ. ಫ್ಯಾಷನ್ ಮಾಡೇಲ್ ಡಿಕೆಸುರೇಶ್ ಕಂಪೆನಿ ಎಂಡಿ ಎಂದೆಲ್ಲಾ ಅನರ್ಥವಾಗಿ ಬರೆದುಕೊಂಡಿರುವುದು ಕಂಡು ಬಂದಿದೆ.

ಒಮೆ ಎಲೆಕ್ಷನ್ ಇ–ಎಲೆಕ್ಟ್ರೋಲ್ ಫೋಟೋ ಐಡಿ ಕಾರ್ಡ್ ಎಂದು ಒಂದು ಪೋಸ್ಟ್ ಹಾಕಿದ್ದು, ಅದರಲ್ಲಿ ಹೆಸರನ್ನು ಪವಿತ್ರ ಹೆಚ್. ಎನ್., ಗಂಡನ ಹೆಸರು ಡಿ.ಕೆ.ಸುರೇಶ್ ಎಂದು ಉಲ್ಲೇಖಿಸಿರುವುದು ಕಂಡು ಬಂದಿದೆ.

ಕಾರ್ಡ್‌ನ ಅಸಲಿಯತ್ತು ಅನುಮಾನ ಮೂಡಿಸುವಂತಿದೆ.

ಮಹಿಳೆ ತಮ ಇನ್ಸಟಾಗ್ರಾಮನಲ್ಲಿ ಪ್ರತಿ ದಿನ ಒಂದೊಂದು ವಿಡಿಯೋವನ್ನು ಹರಿಯ ಬಿಡುತ್ತಿರುವಆಕೆ,ತಮಭಾವಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

ಹಲವಾರು ತಿಂಗಳಿನಿಂದಲೂ ಆಕೆ ಪೋಸ್ಟ್ ಮಾಡುವ ಪ್ರತಿಯೊಂದು ವಿಡಿಯೋದಲ್ಲಿ ಯಾವುದಾದರೂ ಒಂದು ರೂಪದಲ್ಲಿ ತಮ ಪತಿ ಡಿ.ಕೆ.ಸುರೇಶ್ ಎಂದು ಉಲ್ಲೇಖ ಮಾಡಿಮಾಡುತ್ತಾರೆ. ಅವರಿಗೂ ನಾನು ಫೋಟೋ ಶೇರ್ ಮಾಡುವುದು ಇಷ್ಟ, ಅವರು ಒಳ್ಳೆಯ ಕೆಲಸ ಮಾಡಿದಾಗ ನಾನು ಅವರ ಫೋಟೋ ಪೋಸ್ಟ್ ಮಾಡುತ್ತೇನೆ.

ಮೂರು ಬಾರಿ ಸಂಸದರಾಗಿ ತುಂಬಾ ಉತ್ತಮ ಕೆಲಸ ಮಾಡಿದ್ದಾರೆ. ನಾನು ಅವರಿಗೆ ಯಾವುದಕ್ಕೂ ಕಟ್ಟುಪಾಡು ವಿಧಿಸುವುದಿಲ್ಲ, ಅವರು ಅವರ ಕೆಲವನ್ನು ಮಾಡಿಕೊಳ್ಳಲು ಬಿಟ್ಟು ಬಿಡುತ್ತೇನೆ. ಮೊದಲು ನಾನು ಅವರಿಗೆ ಅಭಿಮಾನಿ ಎಂದು ಹೇಳಿಕೊಂಡಿದ್ದಾರೆ.

ಡಿ.ಕೆ.ಸುರೇಶ್‌ಅವರುಅತ್ಯಂತಸಕ್ರಿಯವ್ಯಕ್ತಿಎಲ್ಲಾ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಎಂದು ಹೊಗಳಿಕೆಯ ಮಾತುಗಳನ್ನಾಡಿದ್ದಾರೆ. ತಮನ್ನು ತಾವು ಸರ್ಕಾರಿ ನೌಕರರು ಎಂದು ಹೇಳಿಕೊಂಡಿರುವ ಮಹಿಳೆ, ನನ್ನ ಗಂಡ ಸಮರ್ಥ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ. ಇನ್?ಸ ಟಾಗ್ರಾಮ್ ನಲ್ಲಿ ಪೋಸ್ಟ್ ಗಳಲ್ಲಿ ತಮ ಫೋಟೋ ಹಾಕಿಕೊಂಡು, ಪೋಲಿಟಿಷಿಯನ್ ಎಂದು ಬರೆದುಕೊಳ್ಳುತ್ತಾರೆ.

ಕೆಲ ವಿಡಿಯೋಗಳಲ್ಲಿ ತಾನು ಸರ್ಕಾರಿ ನೌಕರೆ ಎಂದು ಹೇಳಿಕೊಂಡಿದ್ದಾರೆ. ಮಹಿಳೆ ಈ ರೀತಿ ಪೋಸ್ಟ್ ಹಾಕುತ್ತಿರುವ ಕುರಿತು ವಕಿಲರೊಬ್ಬರು ದೂರು ನೀಡಿದ್ದಾರೆ. ಆದರೂ ಆಕೆ ತಮ ಪೋಸ್ಟ್ ಹಾಕುವುದನ್ನು ಮುಂದುವರೆಸಿದ್ದಾರೆ.

## ದಲಿತ ಸೇನೆಯ ನೂತನ ಪದಾಧಿಕಾರಿಗಳ ನೇಮಕ

**ಹೊಸಪೇಟೆ** : ಹೊಸಪೇಟೆ ತಾಲೂಕಿನ ನಗರದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಮತ್ತು ದಲಿತ ಸೇನೆಯ ಪದಾಧಿಕಾರಿಗಳ ಆಯ್ಕೆ ನಗರದ ವರಕೇರಿ 11ನೇ ವಾರ್ಡ್ ಗ್ರಂಥಾಲಯ ಭವನದಲ್ಲಿ ಗುರುವಾರ ನಗರದಲ್ಲಿ ಉದ್ಘಾಟನೆ ಸಮಾರಂಭ ಆಚರಿಸಲಾಯಿತು,



ಕಾರ್ಯಕ್ರಮದ ಅಧ್ಯಕ್ಷತೆ ಹಿರಿಯ ಮುಖಂಡರಾದ ರಾಮಕೃಷ್ಣ.ಈಶ್ವರ್. ರಂಗಮ್ಮ. ಬಸವರಾಜ್. ಇಂತಿಯಾಜ್. ರಫೀಕ್ ವಹಿಸಿದರು ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಬುದ್ಧ ಬಸವ ಅಂಬೇಡ್ಕರ್ ಪುಷ್ಪ ನಮನ ಸಲ್ಲಿಸಿ ಪ್ರಾರಂಭ ಮಾಡಲಾಯಿತು,

ರಾಮಕೃಷ್ಣ ಅವರು ಮಾತನಾಡಿದ ಯುವಕರು ದುಷ್ಟ ಚಟಕ್ಕೆ ಬಲಿಯಾಗಬಾರದು ಸರ್ಕಾರದ ಸೌಲಭ್ಯ ಮತ್ತು ಕೌಶಲ್ಯ ತರಬೇತಿ ಪಡೆದು'ಯುವಕರು ಮುಂದೆ ಬರಬೇಕು ಎಂದು ಹೇಳಿದರು.ನಂತರ ಮಾಜಿ ನಗರಸಭೆ ಸದಸ್ಯರಾದ ಬಸವರಾಜ್ ಮಾತನಾಡಿ ನಗರದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆ ಕಡಿವಾಣ ಹಾಕಬೇಕು ಜಿಲ್ಲಾಧಿಕಾರಿಗೆ ಮನವಿ ಮಾಡಿ ಹಂತ ಹಂತವಾಗಿ ಕಡಿಮೆ ಮಾಡಬೇಕು ಎಂದು ತಿಳಿಸಿದರು

ಈ ಉದ್ಘಾಟನೆ ಸಮಾರಂಭ ಕಾರ್ಯಕ್ರಮದಲ್ಲಿ ರಾಮಕೃಷ್ಣ.ಚಿದಾನಂದಪ್ಪ.ಜಿ ಕೊಲ್ಲಾಪುರಿ ಜಿಲ್ಲಾ ಅಧ್ಯಕ್ಷರು ಸ್ಥಳೀಯ ಮುಖಂಡರು ಹಾಗೂ ಪದಾಧಿಕಾರಿ ಗಳಿಗೆ ದಲಿತ ಸೇನೆ ಸಂಘದ ಆದೇಶ ಪತ್ರ ನೀಡುವ ಮೂಲಕ ಸಂಘಟನೆಗೆ ಬರ ಮಾಡಿ ಕೊಂಡರು ವಾರ್ಡ್ ಘಟಕದ ಅಧ್ಯಕ್ಷರಾಗಿ ಎಂ.ಶಿವರಾಜ್ ಉಪಾಧ್ಯಕ್ಷರಾಗಿ ಬಿ. ಶರೀಫ್, ಗೌರವ ಅಧ್ಯಕ್ಷರಾಗಿ , ಪ್ರಧಾನ ಕಾರ್ಯಧ್ಯಕ್ಷರಾಗಿ ದಾಸರ ಚಿದಂಬರ್ , ಸಹ ಕಾರ್ಯದರ್ಶಿ ಈರಣ್ಣ ಖಜಾಂಚಿ ದಾಸರ ಮಲ್ಲಿಕಾರ್ಜುನ ಸಂಘಟನೆ ಕಾರ್ಯದರ್ಶಿ ಚಂದ್ರಹಾಸ,ಅಭಿಷೇಕ್ ವಕ್ತರು ಹೆಚ್ ಗೌತಮ್ ಗೌರವಾನ್ವಿತ ಸಲಹೆಗಾರ, ಆನಂದ್,ಸಿದ್ಧಾರ್ಥ್ಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮುಸ್ಲಿಂ ಸಮುದಾಯದ ಬೆಂಬಲಕ್ಕೆ ನಿಂತ ಮುಖಂಡಿಗೆ ಅಭಿನಂದನೆ

Karnataka Muslim Unity KMU

**ಇಲಕಲ್ಲ** : ವಿಜಯಪುರದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ದಿನಾಂಕ: 28–04–2025ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯಲ್ಲಿ ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಯ ಶಾಸಕರು ಬಹಿರಂಗವಾಗಿ ಭಾಗವಹಿಸಿಮುಸ್ಲಿಂಸಮುದಾಯದಬೆಂಬಲಕ್ಕೆ ನಿಂತು ಪ್ರವಾದಿ ಮೊಹಮ್ಮದ (ಸಅ) ರವರ ನಿಂದನೆ ಪ್ರಕರಣವನ್ನು ಖಂಡಿಸಿ ವಿಜಯಪುರ ಶಾಸಕ ಯತ್ನಾಳ ಪಾಟೀಲಗೆ ಹಿಗ್ಗಾಮುಗ್ಗಾ ಜಾಡಿಸಿ ಇತಿಹಾಸ ನಿರ್ಮಿಸಿದ್ದಾರೆ.

ಈ ಮುಖಂಡರಿಗೆ ಮುಸ್ಲಿಂ ಸಮಾಜ ಸೆಲ್ಯೂಟ್ ಮಾಡುವ ಮೂಲಕ ಅಭಿನಂದಿಸುತ್ತದೆ ಎಂದು ಕೆ.ಎಂ.ಯೂ ಸಂಘಟನೆ ಹೇಳಿದೆ.

ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಕಾರಣಕ್ಕೆ ಬಸವನಬಾಗೇವಾಡಿ ಸಚಿವ ಶಿವಾನಂದ ಪಾಟೀಲ, ಇಂಡಿ ಶಾಸಕಯಶವಂತರಾಯಗೌಡ ಪಾಟೀಲ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಹಾಗೂ ಸಿಂದಗಿ ಶಾಸಕ ಅಶೋಕ ಮನಗೂಳಿ, ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ,


ಮಾಜಿ ಶಾಸಕ ರಾಜು ಆಲಗೂರ, ಹಾಗೂ ಇನ್ನಿತರ ಅನ್ಯಧರ್ಮಿಯ ಮುಖಂಡರಿಗೆ ರಾಜ್ಯದ ಸಮಸ್ತ ಮುಸ್ಲಿಂರ ಪರವಾಗಿ ಕರ್ನಾಟಕ ಮುಸ್ಲಿಂ ಯೂನಿಟಿ ಹೃದಯ ಪೂರ್ವಕ ಅಭಿನಂದನೆ ಸಲ್ಲಿಸುತ್ತದೆ.

ಪ್ರವಾದಿ ಮೊಹಮ್ಮದ ಪೈಗಂಬರ (ಸಅ) ಕುರಿತು ಅವಹೇಳನಕಾರಿಯಾಗಿ ಮಾತನಾಡಿದ ಯತ್ನಾಳ ಪಾಟೀಲ ವಿರುದ್ಧ ತೀಕ್ಷ್ಣವಾಗಿ ಹರಿಹಾಯ್ದಿದ್ದ ಸಚಿವ ಶಿವಾನಂದ ಪಾಟೀಲ ಮತ್ತು ಶಾಸಕ ವಿಜಯಾನಂದ ಕಾಶಪ್ಪನವರ, ಯಶವಂತರಾಯಗೌಡ ಪಾಟೀಲ ವಿರುದ್ಧ ಯತ್ನಾಳಪಾಟೀಲವೈಯಕ್ತಿಕನಿಂದನೆಗೆಇಳಿದು ನಾಲಿಗೆ ಹರಿಬಿಟ್ಟು ಅಪ್ಪನಿಗೆ ಹುಟ್ಟಿದವರಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಮುಖಂಡರಾದ ಸಚಿವ ಶಿವಾನಂದ ಪಾಟೀಲ ಮತ್ತು ಶಾಸಕ ವಿಜಯಾನಂದ ಕಾಶಪ್ಪನವರ ಸವಾಲು ಸ್ವೀಕರಿಸಿ ಯತ್ನಾಳ ಪಾಟೀಲ ಅಪ್ಪನಿಗೆ ಹುಟ್ಟಿದವನಾಗಬೇಕು ತಕ್ಷಣವೇ ಬಿಜೆಪಿ ಪಕ್ಷಕ್ಕೆ ರಾಜೀನಾಮೆ ನೀಡಬೇಕು ಮತ್ತು ಅದನ್ನು ಸಾರ್ವತ್ರಿಕವಾಗಿ ಸ್ಪಷ್ಟಪಡಿಸಬೇಕು. ನಂತರ ನಮ್ಮ ಅಭಿಮಾನದ ಶಾಸಕರು ರಾಜೀನಾಮೆ ಕೊಟ್ಟು ಚುನಾವಣಾ ಕಣದಲ್ಲಿ ಬಂದು ತಕ್ಕಪಾಠ ಕಲಿಸುತ್ತಾರೆ ಎಂದು ರಾಜ್ಯಾಧ್ಯಕ್ಷ ಜಬ್ಬಾರ ಕಲಬುರ್ಗಿ ಹೇಳಿದ್ದಾರೆ.

## ಬಡತನದಲ್ಲಿ ಅರಳಿದ ಪ್ರತಿಭೆ

**ಕೂಡ್ಲಿಗಿ** : ತಾಲ್ಲೂಕಿನ ಬೆಳ್ಳಕಟ್ಟೆ ಗ್ರಾಮದ ಜಿ.ಎ. ಉಮೇಶ್ ಶುಕ್ರವಾರ ಪ್ರಕಟವಾದ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಶೇ 99.36ರಷ್ಟು ಅಂಕ ಪಡೆದಿದ್ದಾರೆ.



625ಕ್ಕೆ 621 ಅಂಕ ಪಡೆದಿರುವ ಉಮೇಶ್ ಆಖಂಡ ಕೂಡ್ಲಿಗಿ ತಾಲ್ಲೂಕಿಗೆ ಪ್ರಥಮ ಹಾಗೂ ಜಿಲ್ಲೆಗೆ ಮೂರನೇ ಸ್ಥಾನ ಪಡೆದಿದ್ದು, ಕನ್ನಡ ಮಾಧ್ಯಮದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಹರಕಬಾವಿ ಗ್ರಾಮದ ಶ್ರೀ ಚೌಡೇಶ್ವರಿ ಪ್ರೌಢಶಾಲೆಯಲ್ಲಿಓದಿರುವಉಮೇಶತಾಯಿಡಿ.ಎನ್. ವಾಣಿ ಟೈಲರಿಂಗ್ ಮಾಡಿಯೇ ಜೀವನ ನಡೆಸಬೇಕು. ಪ್ರತಿ ನಿತ್ಯ ಬೆಳ್ಳಕಟ್ಟೆಯಿಂದ ಹಾರಕಬಾವಿಯವರಗೆ ನೆಡೆದುಕೊಂಡು ಶಾಲೆಗೆ ಬಂದು ಹೋಗಬೇಕು. ಉಮೇಶ್ ಅವರ ಅಕ್ಕ ಪಿಯುಸಿ ಮುಗಿಸಿದ್ದು, ತಂಗಿ 9ನೇ ತರಗತಿ ಓದುತ್ತಿದ್ದಾಳೆ. ಬಡತನದಲ್ಲಿಯೇ ಪ್ರತಿ ದಿನ ಶಾಲೆಗೆ ಬಂದು ಪಾಠಗಳ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದ ಉಮೇಶ್ ಮೊದಲಿನಿಂದಲೂ ಓದಿನಲ್ಲಿ ಮುಂದಿದ್ದು, ಎಸ್ ಎಸ್ ಎಲ್ ಸಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾನೆ ಎಂದು ಮುಖ್ಯ ಶಿಕ್ಷಕ ಸಿ. ಮಹಾಂತೇಶ್ ಹೇಳಿದ್ದು, ಇತನ ಸಾಧನೆಗೆ ಶಾಸಕ ಡಾ. ಶ್ರೀನಿವಾಸ್ ಎನ್.ಟಿ ಹಾಗೂ ಶಾಲಾ ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618